# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

*Centre of Excellence for Farmer Producer Organizations*

ತ್ರೈಮಾಸಿಕ ಇ-ಸುದ್ದಿ ಪತ್ರಿಕೆ

ಸಂಚಿಕೆ 1 • ಏಪ್ರಿಲ್ 2025 www.coefpo.org


# ಕರುನಾಡ ಎಫ್.ಪಿ.ಒ ಸಮಾಚಾರ





## ಸಲಹಾ ಸಮಿತಿ

**ಶ್ರೀಮತಿ ಉಮಾ ಮಹಾದೇವನ್, ಭಾ.ಆ.ಸೇ**
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು

**ಡಾ. ರವಿಶಂಕರ್ ಜೆ. ಭಾ.ಆ.ಸೇ**
ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ

**ಡಾ. ಶಮ್ಲಾ ಇಕ್ಬಾಲ್, ಭಾ.ಆ.ಸೇ**
ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಡಾ. ವಿಷ್ಣುವರ್ಧನ**
ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

**ಶ್ರೀ ಡಿ.ಎಸ್. ರಮೇಶ್, ಭಾ.ಆ.ಸೇ**
ನಿರ್ದೇಶಕರು, ತೋಟಗಾರಿಕೆ ಇಲಾಖೆ

**ಶ್ರೀ ವೈ. ಎಸ್. ಪಾಟೀಲ, ಭಾ.ಆ.ಸೇ**
ಆಯುಕ್ತರು, ಕೃಷಿ ಇಲಾಖೆ

**ಮಹೇಶ್ ಬಿ. ಶಿರೂರು, ಭಾ.ಅ.ಸೇ**
ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ

**ಶ್ರೀ ಜಿ. ಟಿ. ಪುತ್ರ**
ನಿರ್ದೇಶಕರು, ಕೃಷಿ ಇಲಾಖೆ

**ಶ್ರೀ ಪರ್ವೇಜ್ ಬಂಥನಾಳ**
ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ

## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ: ಕರ್ನಾಟಕ ಸರ್ಕಾರದ ಒಂದು ಅನನ್ಯ ಸಂಸ್ಥೆ

ರೈತ ಉತ್ಪಾದಕರ ಸಂಸ್ಥೆಗಳನ್ನು (ಎಫ್‌ಪಿಒ) ಸಂಘಟಿಸಿ ಅವುಗಳ ಸಾಂಸ್ಥಿಕ ಶಕ್ತಿಯನ್ನು ಬಲಪಡಿಸಲು ಸಂಸ್ಥೆಗಳ ಉದ್ಯಮಶೀಲತೆಯ ಅಭಿವೃದ್ಧಿಗಾಗಿ, ತಾಂತ್ರಿಕ ಸಹಾಯ ಹಾಗೂ ಆಡಳಿತಾತ್ಮಕ ಕಾರ್ಯಗಳ ಬಗ್ಗೆ ರೈತ ಉತ್ಪಾದಕರ ಸಂಸ್ಥೆಗಳ ಅವಶ್ಯಕತೆಗಳನ್ನು ಅರ್ಥೈಸಿಕೊಂಡು ರಾಜ್ಯ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ (COEFPO) ವನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯು ಇಲ್ಲಿಯವರೆಗೂ ರಾಜ್ಯದಾದ್ಯಂತ ವಿವಿಧ ಇಲಾಖೆ/ ಸಂಸ್ಥೆಗಳಾದ ತೋಟಗಾರಿಕೆ, ನಬಾರ್ಡ್, ಜಲಾನಯನ ಅಭಿವೃದ್ಧಿ ಇಲಾಖೆ, ರೇಷ್ಮೆ, ಕೈಮಗ್ಗ & ಜವಳಿ, ಮೀನುಗಾರಿಕೆ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳ, ಕರ್ನಾಟಕ ಜಾನುವಾರು ಅಭಿವೃದ್ಧಿ ಸಂಸ್ಥೆ, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ಸಂಸ್ಥೆಗಳಿಂದ ಪ್ರೋತ್ಸಾಹಿಸಲಾದ 550 ಕ್ಕೂ ಅಧಿಕ ಎಫ್‌ಪಿಒಗಳಿಗೆ 350 ಕ್ಕೂ ಹೆಚ್ಚು ತರಬೇತಿಗಳನ್ನು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆಡಳಿತ ಮಂಡಳಿಯ ನಿರ್ದೇಶಕರುಗಳು, ಅಕೌಂಟೆಂಟ್ ಗಳು, ಸದಸ್ಯ ರೈತರು, ಸಂಪನ್ಮೂಲ ಸಂಸ್ಥೆಗಳ ಸಿಬ್ಬಂದಿಗಳು, ವಿವಿದ ಅನುಷ್ಠಾನ ಸಂಸ್ಥೆಗಳ ಅಧಿಕಾರಿಗಳು, ಇಲಾಖೆ ಅಧಿಕಾರಿಗಳು ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್) ಹಾಗೂ ಇತರ ಪಾಲುದಾರರಿಗೆ ಎಫ್‌ಪಿಒಗಳ ಪರಿಕಲ್ಪನೆ, ರಚನೆ, ಆಡಳಿತ, CEO ಗಳ & ನಿರ್ದೇಶಕರುಗಳ ಪಾತ್ರ & ಜವಾಬ್ದಾರಿಗಳು, ಕಂಪನಿ ಕಾಯ್ದೆಗಳ ಕಾನೂನಾತ್ಮಕ ಅನುಸರಣೆಗಳು, ಖಾತೆ & ಪುಸ್ತಕಗಳ ನಿರ್ವಹಣೆ, GST & ತೆರಿಗೆಗಳು, ಮೌಲ್ಯ ಸರಪಳಿ ವಿಶ್ಲೇಷಣೆ, ವ್ಯವಹಾರ ಯೋಜನೆ ಪೂರ್ವ ತಯಾರಿ, ವ್ಯವಹಾರ ಯೋಜನೆ ಮಾದರಿ, ಯೋಜನಾ ವರದಿ, ವಾರ್ಷಿಕ ಕ್ರಿಯಾ ಯೋಜನೆ, ವ್ಯಾಪಾರ ಯೋಜನೆಗಳ ತಯಾರಿ & ಉತ್ತಮ ಗುಣಮಟ್ಟದ ಉತ್ಪಾದನೆ, ಶ್ರೇಣಿಕರಣ, ಸಂಸ್ಕರಣೆ, ಮೌಲ್ಯವರ್ಧನೆ, ಮಾರುಕಟ್ಟೆ ಕೌಶಲ್ಯಗಳು, ಪ್ಯಾಕೇಜಿಂಗ್ ಮತ್ತು ರಫ್ತಿನ ಬಗ್ಗೆ ಯಶಸ್ವಿಯಾಗಿ ಆಯೋಜಿಸಿರುವ ಅನುಭವ ಹೊಂದಿದೆ. ಇದಲ್ಲದೆ ನಮ್ಮ ಸಂಸ್ಥೆಯು ಉತ್ತಮ ತರಬೇತಿ ಸೌಲಭ್ಯ, ವಸತಿ ವ್ಯವಸ್ಥೆ ಹಾಗೂ ನುರಿತ ಸ್ಥಳೀಯ ಭಾಷಾ ಸಂಪನ್ಮೂಲ ತಜ್ಞರ ಮೂಲಕ ಗುಣಮಟ್ಟದ ತರಬೇತಿ ನೀಡಲು ಕಾರ್ಯಕ್ಷಮತೆ ಹೊಂದಿದೆ.

### ಉದಯ

ಕರ್ನಾಟಕ ಸರ್ಕಾರವು ತನ್ನ 2016-17ನೇ ಸಾಲಿನ ಆಯವ್ಯಯದಲ್ಲಿ ರಾಜ್ಯದ ತೋಟಗಾರಿಕೆ ಇಲಾಖೆ ಮೂಲಕ ಸ್ಥಾಪಿಸಲ್ಪಟ್ಟ ರೈತ ಉತ್ಪಾದಕ ಸಂಸ್ಥೆಗಳ ಬೆಂಬಲ ಹಾಗೂ ಅಭಿವೃದ್ಧಿಗೆ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸ್ಥಾಪನೆಯನ್ನು ಘೋಷಿಸಿದ್ದು, ಅದರಂತೆ ಸರ್ಕಾರದ ಆದೇಶ ಸಂಖ್ಯೆ: ತೋಇ 17/2017, ದಿನಾಂಕ 30.03.2017ರ ಪ್ರಕಾರ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸಂಘಗಳ ನೋಂದಣಿ ಕಾಯ್ದೆ 1960ರ ಅಡಿಯಲ್ಲಿ ಸ್ಥಾಪಿಸಲಾಯಿತು. ಈ ಸಂಸ್ಥೆಯು ದಿನಾಂಕ 21.08.2017 ರಂದು ನೋಂದಾಯಿಸಲ್ಪಟ್ಟಿದ್ದು. ಅದರ ನೋಂದಾಯಿತ ಕಛೇರಿ, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣ ಜಿ. ಕೆ. ವಿ. ಕೆ., ಬೆಂಗಳೂರಿನಲ್ಲಿದೆ.

### ಉದ್ದೇಶಗಳು

- ರೈತ ಉತ್ಪಾದಕ ಸಂಸ್ಥೆಗಳಿಗೆ ಜ್ಞಾನ ಸಹಯೋಗ ನೀಡುವುದು ಮತ್ತು ರೈತ ಉತ್ಪಾದಕ ಸಂಸ್ಥೆಗಳ ಸುಸ್ಥಿರ ನಿರ್ವಹಣೆಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಆಯೋಜಿಸುವುದು
- ಸರ್ಕಾರದ ಅಭಿವೃದ್ಧಿ ಇಲಾಖೆಗಳು, ಕೃಷಿ ಸಂಬಂಧಿ ವಿಶ್ವವಿದ್ಯಾಲಯಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಸಾರ್ವಜನಿಕ ಮತ್ತು ಖಾಸಗಿ ಪಾಲುದಾರರೊಂದಿಗಿನ ಸಂಬಂಧವನ್ನು ವೃದ್ಧಿಸುವ ಮೂಲಕ ರೈತ ಉತ್ಪಾದಕ ಸಂಸ್ಥೆಗಳ ಪ್ರಭಾವವನ್ನು ಹೆಚ್ಚಿಸುವುದು.
- ರೈತ ಉತ್ಪಾದಕ ಸಂಸ್ಥೆಗಳಲ್ಲಿ ಉತ್ತಮ ಅಭ್ಯಾಸಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ನವೀನ ಕಲಿಕೆಗಳನ್ನು ರಾಜ್ಯಕ್ಕೆ ಮತ್ತು ಸಹಭಾಗಿ ಸಂಸ್ಥೆಗಳಿಗೆ ನೀಡಲು ಪ್ರಸಿದ್ಧ ಸಂಸ್ಥೆಗಳೊಂದಿಗೆ ಸಹಯೋಗ ಬೆಳೆಸುವುದು
- ಉತ್ಪಾದಕ ಸಂಸ್ಥೆಗಳ ಹಾಗೂ ಸಣ್ಣ ರೈತರಂತಹ ಅನಾನುಕೂಲತೆಗಳನ್ನು ಅನುಭವಿಸುವವರ ಆರ್ಥಿಕ ಸುಸ್ಥಿರತೆ ಹಾಗೂ ಸ್ವಾವಲಂಬನೆ ಉತ್ತೇಜಿಸಲು ಪರಿಣಾಮಕಾರಿ ಸಾಂಸ್ಥಿಕ ಮಾದರಿಯನ್ನು ಪ್ರದರ್ಶಿಸುವುದು
- ರೈತ ಉತ್ಪಾದಕ ಸಂಸ್ಥೆಗಳ ವಿವಿಧ ಪಾಲುದಾರರಿಗೆ ತರಬೇತಿ, ಸಲಹೆ, ಹಾಗೂ ಸಂಶೋಧನೆ ಮೂಲಕ ವ್ಯಾವಹಾರಿಕ ಸಾಮರ್ಥ್ಯವನ್ನು ಹೆಚ್ಚಿಸುವುದು
- ತೋಟಗಾರಿಕೆ ಹಾಗೂ ಸಂಬಂಧಿಸಿದ ಕ್ಷೇತ್ರಗಳ ವಿವಿಧ ಪಾಲುದಾರರನ್ನೊಳಗೊಡಂತೆ ಸರ್ಕಾರ ಹಾಗೂ ಸಾರ್ವಜನಿಕ ಸಂಸ್ಥೆಗಳ ಜೊತೆಗೆ ಪಾಲುದಾರಿಕೆಯನ್ನು ಉತ್ತೇಜಿಸುವುದು.

# ಕರ್ನಾಟಕದಲ್ಲಿ ರೈತ ಉತ್ಪಾದಕರ ಸಂಘಟನೆಗಳನ್ನು (ಎಫ್.ಪಿ.ಒ.ಗಳು) ಬಲಪಡಿಸುವ ಉದ್ದೇಶದಿಂದ ಮಾಡಲಾದ ಒಪ್ಪಂದ (MoU)




## ತರಬೇತಿ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿಗೆ ಒಟ್ಟಾಗಿ ಹೆಜ್ಜೆ: CoE-FPO ಮತ್ತು ಸಹ್ಯಾದ್ರಿಯ ಒಪ್ಪಂದ..



ದಿನಾಂಕ 31, ಡಿಸೆಂಬರ್, 2024 ರಂದು ನಾಸಿಕ್‌ನ ಸಹ್ಯಾದ್ರಿ ಫಾರ್ಮ್ಸ್ ಪೋಸ್ಟ್ ಹಾರ್ವೆಸ್ಟ್ ಕೇರ್ ಲಿಮಿಟೆಡ್ ನಲ್ಲಿ, ಬೆಂಗಳೂರಿನ ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ(COE-FPO), ಸಹ್ಯಾದ್ರಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ (SFPCL) ಮತ್ತು ಸಹ್ಯಾದ್ರಿ ಗ್ರಾಮೀಣ ಅಭಿವೃದ್ಧಿ ಫೌಂಡೇಶನ್ (SRDF) ಜೊತೆಗೆ ಮಹತ್ವದ ಒಪ್ಪಂದ ಪತ್ರ (MoU)ಕ್ಕೆ ಸಹಿ ಹಾಕಿತು. ಈ ಸಹಕಾರವು ಕರ್ನಾಟಕದಲ್ಲಿ 1,460 ಕ್ಕೂ ಹೆಚ್ಚು FPO ಗಳನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ, ಅವುಗಳ ಸುಸ್ಥಿರತೆ, ವಿಸ್ತರಣೆ ಮತ್ತು ಬೆಳವಣಿಗೆಗೆ ನಾಂದಿಯಾಗಲಿದೆ. 2025ಕ್ಕೆ ಕಾಲಿಡುತ್ತಿರುವಾಗ, ಈ ಸಹಯೋಗವು ತರಬೇತಿ, ಸಾಮರ್ಥ್ಯ ನಿರ್ಮಾಣ, ಕ್ಷೇತ್ರಭೇಟಿ ಮತ್ತು ಮೌಲ್ಯ ಸರಪಳಿ ಅಭಿವೃದ್ಧಿಯ ಮೂಲಕ ಎಫ್ ಪಿ ಒಗಳಿಗೆ ಸಹಾಯ ನೀಡುವ ನಿಟ್ಟಿನಲ್ಲಿ CoE-FPOಯ ಅಚಲ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

## ಮುಖ್ಯಅಂಶಗಳು:

**ಕರ್ನಾಟಕ ಸರ್ಕಾರದ ನಿಯೋಜಿತ ತಂಡ:**

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಯ ಕಾರ್ಯದರ್ಶಿಗಳು ಡಾ. ಶಮ್ಲಾ ಇಕ್ಬಾಲ್, ಭಾ.ಆ.ಸೇ, ನೇತೃತ್ವದ ಕರ್ನಾಟಕ ಸರ್ಕಾರದ ಪ್ರತಿನಿಧಿಯ ತಂಡದಲ್ಲಿ ಕೆಳಗಿನ ಅಧಿಕಾರಿಗಳು ಸೇರಿದ್ದರು: ತೋಟಗಾರಿಕೆ ಇಲಾಖೆಯ ನಿರ್ದೇಶಕರು ಶ್ರೀ ಡಿ.ಎಸ್. ರಮೇಶ್, ಭಾ.ಆ.ಸೇ, ಜಲಾನಯನ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಶ್ರೀ ಪರ್ವೇಜ್ ಬಂಥನಾಳ್, CoE-FPOನ ನಿರ್ದೇಶಕರು ಡಾ. ರಾಘವೇಂದ್ರ ಮೆಸ್ತ, ತೋಟಗಾರಿಕೆ ಇಲಾಖೆಯ ಹೆಚ್ಚುವರಿ ನಿರ್ದೇಶಕರು ಡಾ. ಪ್ರಕಾಶ್ ಸೋಬರದ್, IFAB ವ್ಯವಸ್ಥಾಪಕರು ಹಾಗೂ ತೋಟಗಾರಿಕೆ ಇಲಾಖೆಯ ಸಂಯುಕ್ತ ನಿರ್ದೇಶಕರು ಡಾ. ಎಂ. ವಿಶ್ವನಾಥ್, ಜಲಾನಯನ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಶ್ರೀಮತಿ ಪಂಕಜಾ ಹೆಚ್., ತೋಟಗಾರಿಕೆ ಇಲಾಖೆಯ ಉಪನಿರ್ದೇಶಕಿ ಶ್ರೀಮತಿ ಕ್ಷಮಾ ಪಾಟೀಲ್, ಮತ್ತು CoE-FPOನ ಉಪನಿರ್ದೇಶಕರು ಡಾ. ಸದಾನಂದ ಜಿ.ಕೆ. ಈ ನಿಯೋಜಿತ ತಂಡವು ಕೃಷಿಯ ಪರಿವರ್ತನೆಯತ್ತ ಕರ್ನಾಟಕ ಸರ್ಕಾರದ ದೂರದೃಷ್ಟಿಯನ್ನು ಪ್ರತಿನಿಧಿಸುತ್ತದೆ.

## ಸಹ್ಯಾದ್ರಿ FPCL ತಂಡ:

**ಶ್ರೀ. ವಿಲಾಸ್ ಶಿಂಧೆ, ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು, SFPCL**
**ಶ್ರೀ. ಪ್ರಮೋದ್ ರಾಜೆಭೋಸಲೇ, ಮುಖ್ಯ ಕಾರ್ಯನಿರ್ವಾಹಕರು, SRDF**
**ಶ್ರೀ. ಸುರೇಶ್ ನಖಾತೆ, ವ್ಯವಸ್ಥಾಪಕರು, SRDF**

## ಪ್ರಮುಖ ಅಂಶಗಳು:

**ಸಾಮರ್ಥ್ಯ ನಿರ್ಮಾಣ ಮತ್ತು ತರಬೇತಿ:** FPO ನಿರ್ದೇಶಕರು ಮತ್ತು CEO ಗಳು ನಾಯಕತ್ವ ಹಾಗೂ ಆಡಳಿತ ಕೌಶಲ್ಯಗಳಲ್ಲಿ ನಿಪುಣರಾಗಲು ಅಗತ್ಯ ಜ್ಞಾನ ಮತ್ತು ತರಬೇತಿಯನ್ನು ನೀಡುವುದು.
**ಜ್ಞಾನ ಪಾಲುದಾರಿಕೆ:** ಶಾಶ್ವತ ಕೃಷಿ ಹಾಗೂ ಮೌಲ್ಯ ಸರಪಳಿ ನಿರ್ವಹಣೆಯಲ್ಲಿನ ಸಹ್ಯಾದ್ರಿಯ ಪರಿಣಿತಿಯನ್ನು ಹಂಚಿಕೊಳ್ಳುವುದು.
**ಕ್ಷೇತ್ರ ಭೇಟಿಯಿಂದ ಅನುಭವ:** ರೈತರು ಮತ್ತು ಅಧಿಕಾರಿಗಳಿಗೆ ಸಹ್ಯಾದ್ರಿ ಫಾರ್ಮ್‌ಗಳಲ್ಲಿ ನೇರ ಅಧ್ಯಯನ ಮತ್ತು ಅನುಭವಾತ್ಮಕ ಕಲಿಕೆಗೆ ಅವಕಾಶ.
**ಮೌಲ್ಯ ಸರಪಳಿ ಅಭಿವೃದ್ಧಿ:** ದ್ರಾಕ್ಷಿ, ದಾಳಿಂಬೆ, ಮಾವು ಮತ್ತು ಬಾಳೆಹಣ್ಣು ಬೆಳೆಗಳಿಗೆ ಸಂಬಂಧಿಸಿದ ತೋಟಗಾರಿಕೆ ಮೌಲ್ಯ ಸರಪಳಿಗಳನ್ನು ಬಲಪಡಿಸುವುದು.
**ರಫ್ತು ಉತ್ತೇಜನೆ:** ಕರ್ನಾಟಕದ ತೋಟಗಾರಿಕಾ ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸಿ, ದೇಶಿ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆ ಪ್ರವೇಶವನ್ನು ವಿಸ್ತರಿಸುವುದು.
**ಸಂಸ್ಥಾತ್ಮಕ ಅಭಿವೃದ್ಧಿ:** ಸಮಗ್ರ ಬೆಳವಣಿಗೆಗಾಗಿ ಕರ್ನಾಟಕದ ಅಭಿವೃದ್ಧಿ ಇಲಾಖೆಗಳೊಂದಿಗೆ ಸಹಕರಿಸುವುದು.

## ಪ್ರಾಮುಖ್ಯತೆ:

**ಕೊಯ್ಲೋತ್ತರ ನಿರ್ವಹಣೆ, ಮೌಲ್ಯವರ್ಧನೆ ಮತ್ತು ಸಮಗ್ರ ಮೌಲ್ಯ ಸರಪಳಿ ಮಾದರಿಯಲ್ಲಿನ ಸಹ್ಯಾದ್ರಿಯ ಪರಿಣಿತಿಯಿಂದ, ಕರ್ನಾಟಕದ FPO ಗಳು ಉತ್ತಮ ಆದಾಯ, ಪರಿಣಾಮಕಾರಿ ಆಡಳಿತ ಮತ್ತು ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಗೆ ಸಿದ್ಧವಾಗಿದೆ.**





# ಬುಡಕಟ್ಟು ಎಫ್. ಪಿ. ಒ: ಸಹಕಾರದಿಂದ ಸಮೃದ್ಧಿಗೆ



## ಬುಡಕಟ್ಟು ರೈತ ಉತ್ಪಾದಕರ ಕಂಪನಿಗಳು, ಮೈಸೂರು

ಮೈಸೂರು ಜಿಲ್ಲೆಯ ಹುಣಸೂರು ಮತ್ತು ಹೆಗ್ಗಡದೇವನ ಕೋಟೆ ತಾಲ್ಲೂಕಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗು ರೈತ ಉತ್ಪಾದಕ ಕಂಪನಿಗಳ ಉತ್ಕೃಷ್ಟ ಕೇಂದ್ರದ ಸಹಯೋಗದೊಂದಿಗೆ ನಾಲ್ಕು ಬುಡಕಟ್ಟು ರೈತ ಉತ್ಪಾದಕರ ಕಂಪನಿ (ಬು. ರೈ. ಉ. ಕಂ.) ಗಳನ್ನು ಸ್ಥಾಪನೆ ಮಾಡಲಾಗಿದೆ. ಇವುಗಳಲ್ಲಿ ಬಸವನಗಿರಿ ಬು. ರೈ. ಉ. ಕಂ. ಮತ್ತು ಮಾಸ್ತಿಗುಡಿ ಬು. ರೈ. ಉ. ಕಂ. ಗಳು ಹೆಗ್ಗಡದೇವನ ಕೋಟೆಯಲ್ಲಿದ್ದು ನಾಗಪುರ ಮತ್ತು ಬಿರ್ಸಾಮುಂಡ ಬು. ರೈ. ಉ. ಕಂ. ಗಳು ಹುಣಸೂರು ತಾಲ್ಲೂಕಿನಲ್ಲಿ ಸ್ಥಾಪಿತಗೊಂಡಿವೆ. ಈ ನಾಲ್ಕು ಕಂಪನಿಗಳಿಗೆ ಕಛೇರಿ ಮತ್ತು ಗೋದಾಮು ಸೌಲಭ್ಯಗಳನ್ನು ನಿರ್ಮಿಸಿಕೊಡಲಾಗಿದ್ದು ಕಳೆದ ಮೂರು ವರ್ಷಗಳಿಂದ ಆಸಕ್ತ ಷೇರುದಾರರಿಗೆ ಕಂಪನಿ ವತಿಯಿಂದ ಬಿತ್ತನೆಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಒಟ್ಟಾಗಿ ತರಿಸಿ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಅಲ್ಲದೇ ಅಶಕ್ತ ಷೇರುದಾರರಿಗೆ ಸಾಲದ ರೂಪದಲ್ಲಿ ಅಗತ್ಯ ಪರಿಕರಗಳನ್ನು ನಿರ್ದೇಶಕ ಮಂಡಳಿಯ ಸೂಚನೆಯ ಮೇರೆಗೆ ಪೂರೈಕೆ ಮಾಡಲಾಗುತ್ತಿದ್ದು ಕಟಾವಿನ ನಂತರ ಆ ಹಣವನ್ನು ಮರುಪಾವತಿ ಮಾಡಿಸಿಕೊಳ್ಳಲಾಗುತ್ತಿದೆ.









ಬಸವನಗಿರಿ ಬುಡಕಟ್ಟು ರೈತ ಉತ್ಪಾದಕರ ಕಂಪನಿಗೆ ಕೃಷಿ ಇಲಾಖೆ ಮೂಲಕ ಟ್ರಾಕ್ಟರ್ ಕೊಡಿಸಲಾಗಿದ್ದು ಕಡಿಮೆ ಬಾಡಿಗೆ ದರದಲ್ಲಿ ಉಳುಮೆ, ಇನ್ನಿತರ ಚಟುವಟಿಕೆಗಳಿಗೆ ಬಹಳ ಸಹಕಾರಿಯಾಗಿದೆ. ಅಲ್ಲದೇ ಬಸವನಗಿರಿ ಬು. ರೈ. ಉ. ಕಂ. ಯಲ್ಲಿ ಅಡಿಕೆ ಮತ್ತು ಬಿರ್ಸಾಮುಂಡಾ ಬು. ರೈ. ಉ. ಕಂ. ಯಲ್ಲಿ ತೆಂಗಿನ ನರ್ಸರಿ ಸ್ಥಾಪಿಸಿ ಸಸಿ ಬೆಳೆಸಿ ಮಾರಾಟ ಮಾಡಲಾಗುತ್ತಿದೆ. ಮುಂದುವರಿದು ಉತ್ತಮ ಬೇಸಾಯಕ್ಕೆ ಹಾಗು ಸಾಮರ್ಥ್ಯ ಬಲವರ್ಧನೆಗೆ ಅಗತ್ಯವಿರುವ ತರಬೇತಿಗಳನ್ನು ವಿಷಯ ಸಂಬಂಧಿ ನುರಿತ ವಿಜ್ಞಾನಿಗಳನ್ನು ಕರೆಸಿ, ಪ್ರಾತ್ಯಕ್ಷಿತೆ ಮತ್ತು ಕ್ಷೇತ್ರ ಭೇಟಿಗಳ ಮುಖೇನ ಅವಶ್ಯ ಮಾಹಿತಿಯನ್ನು ರೈತರಿಗೆ ನೀಡಲಾಗುತ್ತಿದೆ. ಕಂಪನಿ ಚಟುವಟಿಕೆಗಳನ್ನು ಚುರುಕುಗೊಳಿಸಲು ಹಾಗೂ ಬಲಗೊಳಿಸಲು ಇತ್ತೀಚೆಗೆ ತೆಂಗಿನ ನಾರಿನ ಮಂಡಳಿ ಜೊತೆಗೆ ಬಸವನಗಿರಿ ಬು. ರೈ. ಉ. ಕಂ. ಹಾಗು ರೈತ ಉತ್ಪಾದಕ ಕಂಪನಿಗಳ ಉತ್ಕೃಷ್ಟ ಕೇಂದ್ರದ ನಡುವೆ ಒಡಂಬಡಿಕೆ ಮಾಡಿಕೊಂಡಿದ್ದು ತೆಂಗಿನ ನಾರಿನ ಉತ್ಪನ್ನಗಳನ್ನು ಹಾಡಿಯ ಆಸಕ್ತ ಮಹಿಳೆಯರ ಮೂಲಕ ಉತ್ಪಾದಿಸಿ ಮಾರಾಟ ಮಾಡಲು ಯೋಜನೆ ರೂಪಿಸಿದ್ದು ಅದಕ್ಕೆ ಬೇಕಾದ ಅಗತ್ಯ ತರಬೇತಿ (4 ತಿಂಗಳು) ಮತ್ತು ಇತರೆ ಅನುಕೂಲಗಳನ್ನು ಪೂರೈಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ಯೋಜನೆಯ ಕೆಲಸವು ಶೀಘ್ರದಲ್ಲಿಯೇ ಪ್ರಾರಂಭವಾಗಲಿದ್ದು ಉಳಿದ ಮೂರು ಕಂಪನಿಗಳಿಗೆ ಈ ಯೋಜನೆಯನ್ನು ವಿಸ್ತರಿಸಲು ಚಿಂತನೆ ನಡೆಸಲಾಗಿದೆ.

# FPO ಮೇಳ 2025





**2025ರ ಫೆಬ್ರವರಿ 28ರಿಂದ ಮಾರ್ಚ್ 2ರವರೆಗೆ ಮೂರು ದಿನಗಳ ರೈತ ಉತ್ಪಾದಕರ ಸಂಸ್ಥೆಗಳ (FPO) ಮೇಳವು ತೋಟಗಾರಿಕೆ ಕಾಲೇಜು ಬೆಂಗಳೂರು ಆವರಣದಲ್ಲಿ ವಿಜೃಂಭಣೆಯಿಂದ ಆಯೋಜಿಸಲಾಗಿತ್ತು.**

ಈ ಕಾರ್ಯಕ್ರಮವನ್ನು ಭಾರತ ಸರ್ಕಾರದ ಸ್ಮಾಲ್ ಫಾರ್ಮರ್ಸ್ ಅಗ್ರಿಬಿಸಿನೆಸ್ ಕಾನ್ಸರ್ಟಿಯಂ (SFAC), ಜಲಾನಯನ ಅಭಿವೃದ್ಧಿ ಇಲಾಖೆ (WDD) ಹಾಗೂ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ (COEFPO)ಗಳ ಸಹಯೋಗದೊಂದಿಗೆ ಸಂಯುಕ್ತವಾಗಿ ಆಯೋಜಿಸಿತ್ತು. ಈ ಸಂಸ್ಥೆಗಳು ಸಮಾನ ಉದ್ದೇಶದಿಂದ, ಸ್ವಯಂ ನಿರ್ವಹಣೆಗೆ ಹಾಗೂ ವ್ಯವಹಾರಿಕವಾಗಿ ಬೆಳೆಯುವ ಸಾಮರ್ಥ್ಯ ಹೊಂದುವಂತೆ ಸಣ್ಣ ರೈತರಿಗೆ ಶಕ್ತಿ ತುಂಬುವ ಸುಸ್ಥಿರ ಜೀವನ ಕಟ್ಟಿಕೊಡುವ ಕಾರ್ಯ ನಿರ್ವಹಿಸುತ್ತಿವೆ. FPO ಮೇಳ 2025 ರೈತ ಉತ್ಪಾದಕರ ಸಂಸ್ಥೆಗಳನ್ನು ಶಕ್ತಿಶಾಲಿಗಳಾಗಿ ರೂಪಿಸುವ ಹಾಗೂ ಕೃಷಿ ಕ್ಷೇತ್ರದಲ್ಲಿ ಸಹಕಾರ ಮತ್ತು ನಾವೀನ್ಯತೆ ಕೃಷಿ ವ್ಯವಹಾರ ಉತ್ತೇಜಿಸುವ ಉದ್ದೇಶದಿಂದ ಹಾಗು ವೈವಿಧ್ಯಮಯ ಉತ್ಪನ್ನಗಳನ್ನು ಗಳನ್ನು ಪ್ರದರ್ಶಿಸಲು, ಮಾರುಕಟ್ಟೆ ವ್ಯಾಪ್ತಿ ಹೆಚ್ಚಿಸಿಕೊಳ್ಳಲು ವೇದಿಕೆ ಕಲ್ಪಿಸುವ ನಿಟ್ಟಿನಲ್ಲಿ ಮಹತ್ವದ ಕಾರ್ಯಕ್ರಮವಾಗಿತ್ತು. ಈ ಮೇಳದಲ್ಲಿ ಅತಿಥಿಗಳು, ಕೃಷಿ ಉದ್ಯಮಿಗಳು ಮತ್ತು ವಿವಿಧ ರೈತ ಉತ್ಪಾದಕರ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಮತ್ತೊಂದು ಮುಖ್ಯ ಉದ್ದೇಶವೆಂದರೆ ರೈತರ ಹಾಗೂ ಖರೀದಿದಾರರ ನಡುವೆ ನೇರ ಮಾರುಕಟ್ಟೆ ಸಂಪರ್ಕವನ್ನು ಒದಗಿಸಿ, FPO ವ್ಯಾಪಾರವನ್ನು ಮತ್ತಷ್ಟು ಬಲಪಡಿಸುವುದು.

## ಉದ್ಘಾಟನೆ



ಕಾರ್ಯಕ್ರಮವು ಕರ್ನಾಟಕದ ಸಾಂಪ್ರದಾಯಿಕ ಲೋಕಕಲೆ ರೂಪುಗಳೊಂದಿಗೆ ಮೆರವಣಿಗೆಯಿಂದ ಪ್ರಾರಂಭವಾಯಿತು. ಅತಿಥಿಗಳು ಮಹಾವಿದ್ಯಾಲಯದ ಪ್ರವೇಶದ್ವಾರದಿಂದ ಎತ್ತಿನಗಾಡಿಯಲ್ಲಿ ವೇದಿಕೆಗೆ ಆಗಮಿಸಿದರು, ಇದರಿಂದ ಭಾಗವಹಿಸಿದವರಿಗೆ ಉತ್ಸಾಹಭರಿತ ವಾತಾವರಣ ನಿರ್ಮಾಣವಾಯಿತು. ಗಣ್ಯ ಅತಿಥಿಗಳು ನವೀನಕೃಷಿ ಆವಿಷ್ಕಾರಗಳು, ಸುಧಾರಿತ ತಂತ್ರಜ್ಞಾನಗಳು ಮತ್ತು ಎಫ್‌ಪಿಓ ವೈವಿಧ್ಯಮಯ ಉತ್ಪನ್ನಗಳನ್ನು ಪ್ರದರ್ಶಿಸುತ್ತಿರುವ ಮಳಿಗೆಗಳನ್ನು ಉದ್ಘಾಟಿಸಿದರು, ಇದು ಪರಸ್ಪರ ಸಂಪರ್ಕ ನಿರ್ಮಾಣ ಮತ್ತು ವ್ಯಾಪಾರ ಸಹಕಾರಗಳಿಗಾಗಿ ಅತ್ಯುತ್ತಮ ಅವಕಾಶವನ್ನು ಒದಗಿಸಿತು. ಬೆಂಗಳೂರು ತೋಟಗಾರಿಕಾ ಮಹಾವಿದ್ಯಾಲಯದ ವಿದ್ಯಾರ್ಥಿಗಳು ರಾಷ್ಟ್ರಗೀತೆ ಮತ್ತು ರೈತಗೀತೆಯನ್ನು ಪ್ರಸ್ತುತಪಡಿಸಿದರು, ನಂತರ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

**ಶ್ರೀ ಎನ್. ಚೆಲುವರಾಯಸ್ವಾಮಿ, ಮಾನ್ಯ ಕೃಷಿ ಸಚಿವರು, ಕರ್ನಾಟಕ ಸರ್ಕಾರ,** ಅವರು ನೀಡಿದ ಪ್ರೇರಣಾದಾಯಕ ಭಾಷಣದಲ್ಲಿ, ಕೃಷಿ ಕ್ಷೇತ್ರದ ಮೇಲೆ ಎಫ್ ಪಿ ಓ ಗಳ ಪರಿವರ್ತನೆಯ ಪರಿಣಾಮವನ್ನು ಹಾಗೂ ರೈತರು ಜೀವನಮಟ್ಟವನ್ನು ಉತ್ತಮಪಡಿಸುವಲ್ಲಿ ಅವುಗಳ ಪಾತ್ರವನ್ನು ತಿಳಿಸಿದರು.

## ಅತಿಥಿಗಳು

ಡಾ. ಶಮ್ಲಾ ಇಕ್ಬಾಲ್,ಭಾ.ಆ.ಸೇ, ಕಾರ್ಯದರ್ಶಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಡಾ. ವಿಷ್ಣುವರ್ಧನ- ಮಾನ್ಯ ಕುಲಪತಿಗಳು, ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ, ಶ್ರೀ ಡಿ.ಎಸ್. ರಮೇಶ್,ಭಾ.ಆ.ಸೇ, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಶ್ರೀ ವೈ. ಎಸ್. ಪಾಟೀಲ್, ಭಾ.ಆ.ಸೇ– ಆಯುಕ್ತರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ,ಡಾ. ಮಹೇಶ್ ಶಿರೂರು,ಭಾ.ಅ.ಸೇ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ. ಶ್ರೀ ಜಿ. ಟಿ. ಪುತ್ರ – ನಿರ್ದೇಶಕರು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಡಾ. ಅಶೋಕ್ ದಳವಾಯಿ, ಐಎಎಸ್, ಅಧ್ಯಕ್ಷರು, ಕರ್ನಾಟಕ ಕೃಷಿ ಬೆಲೆ ಆಯೋಗ, ಕರ್ನಾಟಕ ಸರ್ಕಾರ, ಶ್ರೀ ಪರ್ವೇಜ್ ಬಂಥನಾಳ, ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ,ಡಾ ಜಿ. ಎಸ್. ಕೆ ಸ್ವಾಮಿ, ಡೀನ್, ತೋಟಗಾರಿಕಾ ಮಹಾವಿದ್ಯಾಲಯ, ಬೆಂಗಳೂರು ಉತ್ತಮ್ ಕುಮಾರ್, ಸಣ್ಣ ರೈತರ ಕೃಷಿ ವ್ಯಾಪಾರ ಒಕ್ಕೂಟ (SFAC), ನವದೆಹಲಿ, ಭಾಗವಹಿಸಿದ್ದರು.

# FPO ಮೇಳ 2025



ಎಫ್ ಪಿ ಓ ಮೇಳ 2025 ಯಶಸ್ವಿಯಾಗಿ ಕೃಷಿ ಕ್ಷೇತ್ರದ ಪ್ರಮುಖ ಪಾಲುದಾರರನ್ನು ಒಟ್ಟಿಗೆ ತರುವಲ್ಲಿ ಯಶಸ್ವಿಯಾಯಿತು, ಜ್ಞಾನ ಹಂಚಿಕೆ, ಜಾಲ ನಿರ್ಮಾಣ ಮತ್ತು ತಾಂತ್ರಿಕ ಸಹಕಾರಗಳಿಗೆ ವೇದಿಕೆಯಾಗಿದೆ. ಈ ಕಾರ್ಯಕ್ರಮವು ಎಫ್ ಪಿ ಓ ಗಳನ್ನು ಬಲಪಡಿಸುವತ್ತ ಹಾಗೂ ರೈತರ ಸಮುದಾಯದ ಒಟ್ಟಾರೆ ಬೆಳವಣಿಗೆಯತ್ತ ಸರ್ಕಾರದ ವಿವಿಧ ಸಂಸ್ಥೆಗಳ ಬದ್ಧತೆಯನ್ನು ಮತ್ತಷ್ಟು ಬಲಪಡಿಸಿತು. ಮೂರುದಿನಗಳ ಎಫ್ ಪಿ ಓ ಮೇಳ ಕರ್ನಾಟಕದ ಕೃಷಿ ಆರ್ಥಿಕತೆಯಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಪಾತ್ರವನ್ನು ಹೆಚ್ಚಿಸುವತ್ತ ಮಹತ್ವಪೂರ್ಣ ಹೆಜ್ಜೆಯಾಗಿದೆ. ಮಧ್ಯವರ್ತಿಗಳ ಹಸ್ತಕ್ಷೇಪವನ್ನು ಕಡಿಮೆ ಮಾಡುವುದು, ನೇರ ವ್ಯಾಪಾರವನ್ನು ಉತ್ತೇಜಿಸುವುದು ಹಾಗೂ ಆರ್ಥಿಕ ಸಹಾಯವನ್ನು ನೀಡುವ ಮೂಲಕ, ಸರ್ಕಾರ ಮತ್ತು ಆಯೋಜಕ ಸಂಸ್ಥೆಗಳು ಕೃಷಿಯನ್ನು ಲಾಭದಾಯಕ ಉದ್ಯಮವನ್ನಾಗಿ ಬೆಳೆಸುವತ್ತ ಪ್ರಯತ್ನಿಸುತ್ತಿವೆ.

## ಎಫ್ ಪಿ ಓ ಮೇಳ - 2025 ರಲ್ಲಿ ನಡೆದ ತಾಂತ್ರಿಕ ಅಧಿವೇಶನಗಳು

**ಸಾಮರ್ಥ್ಯ ನಿರ್ಮಾಣ:**

ಎಫ್ ಪಿ ಓ ಸದಸ್ಯರನ್ನು ಆಧುನಿಕ ಕೃಷಿ ವಿಧಾನಗಳು, ಕೊಯ್ಲೋತ್ತರ ನಿರ್ವಹಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕಗಳ ಜ್ಞಾನದಿಂದ ಲಾಭ ಹೊಂದುವಂತೆ ಮಾಡಲು.

ವ್ಯವಸ್ಥಾಪನಾ ಕೌಶಲ್ಯಗಳು, ಹಣಕಾಸು ಸಾಕ್ಷರತೆ ಮತ್ತು ಶಾಸನವಿಧಾನದ ಬಗ್ಗೆ ಅರಿವು ಹೆಚ್ಚಿಸಲು

**ತಂತ್ರಜ್ಞಾನ ಸ್ವೀಕಾರ:**

ಸಣ್ಣ ರೈತರಿಗೆ ಅನುಕೂಲವಾಗುವ ಮಟ್ಟದ ಕೃಷಿ ತಂತ್ರಜ್ಞಾನಗಳು ಮತ್ತು ನಾವೀನ್ಯತೆಗಳನ್ನು ಪರಿಚಯಿಸುವುದು.

ಕೃಷಿ ಯಂತ್ರೋಪಕರಣಗಳು, ನೀರಾವರಿ ವ್ಯವಸ್ಥೆಗಳು ಮತ್ತು ಡಿಜಿಟಲ್ ಸಾಧನಗಳ ಬಳಕೆಯನ್ನು ಪ್ರಾತ್ಯಕ್ಷವಾಗಿ ತೋರಿಸಿಕೊಡುವುದು.



**ಮಾರುಕಟ್ಟೆ ಅಭಿಶಿಕ್ಷಣ:**

ಮಾರುಕಟ್ಟೆ ಧೋರಣೆಗಳು, ಬೆಲೆ ನಿಗದಿ ತಂತ್ರಗಳು ಮತ್ತು ನೇರ ಮಾರುಕಟ್ಟೆ ಬಗ್ಗೆ ಶಿಕ್ಷಣ ನೀಡುವುದು.

ಸಂಗ್ರಹಣೆ, ಬ್ರಾಂಡಿಂಗ್ ಮತ್ತು ಖರೀದಿದಾರರೊಂದಿಗೆ ಚರ್ಚೆ ನಡೆಸುವ ಕೌಶಲ್ಯಗಳನ್ನು ಬಲಪಡಿಸುವುದು.

**ಕಾನೂನು ಅನುಸರಣೆಗಳ ಅರಿವು:**

2013ರ ಕಂಪನಿಗಳ ಅಧಿನಿಯಮ ಮತ್ತು ಇತರ ಸಂಬಂಧಿತ ಕಾಯ್ದೆಗಳ ಅಡಿಯಲ್ಲಿ ಎಫ್ ಪಿ ಓ ಗಳ ಕಾನೂನು ರಚನೆ, ಪಾತ್ರಗಳು ಮತ್ತು ಜವಾಬ್ದಾರಿಗಳನ್ನು ಸ್ಪಷ್ಟಗೊಳಿಸುವುದು.

ಸರ್ಕಾರದ ಯೋಜನೆಗಳು, ಅನುದಾನಗಳು ಮತ್ತು ನೋಂದಣಿಗಳ ಮಾಹಿತಿ

**ಸುಸ್ಥಿರತೆ ಮತ್ತು ಸಂಪನ್ಮೂಲ ನಿರ್ವಹಣೆ:**

ಸಸ್ಥಿರ ಕೃಷಿ ವಿಧಾನಗಳು ಮತ್ತು ಪರಿಣಾಮಕಾರಿ ಸಂಪನ್ಮೂಲ ಬಳಕೆಯನ್ನು ಪ್ರೋತ್ಸಾಹಿಸುವುದು.

ಹವಾಮಾನ ಪ್ರತಿರೋಧಕ ಕೃಷಿ ಹಾಗೂ ಸಮಗ್ರ ಕೀಟ/ಪೋಷಕ ತತ್ತ್ವ ನಿರ್ವಹಣೆಯನ್ನು ಪರಿಚಯಿಸುವುದು.

**ಸಂಸ್ಥೆಯ ಅಭಿವೃದ್ಧಿ:**

ಎಫ್ ಪಿ ಓ ಗಳಲ್ಲಿ ಬಲಿಷ್ಠ ಆಡಳಿತ ರಚನೆಗಳನ್ನು ನಿರ್ಮಿಸುವುದು.

ನಾಯಕತ್ವ , ತಂಡದ ಕೆಲಸ ಮತ್ತು ಸದಸ್ಯರ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು.

# FPO ಮೇಳ 2025

## ಮಾಧ್ಯಮ



ಬೆಳೆಗಳ ಮೌಲ್ಯವರ್ಧನೆಗೆ ಒತ್ತು ನೀಡಿ: ಚಲುವ

ರೈತ ಆತ್ಮಹತ್ಯೆ ಕೊನೆಗೊಳಿಸಲು ಸರ್ಕಾರ ಯತ್ನ



Three-day FPO mela inaugurated

The Hindu Bureau
BENGALURU

"There are a total of 1,472 farmer producer organisations (FPOs) in the State established under various schemes and departments, and there are 8.26 lakh farmer shareholders. Business transactions worth ₹1,073 crore have occurred through these FPOs so far," said Agriculture Minister N. Cheluvarayaswamy on Friday after inaugurating the three-day FPO mela in the College of Horticulture at the University of Horticultural Sciences-Bagalkot (UHS-B) campus in Bengaluru.

Agriculture Minister N. Cheluvarayaswamy at the mela. SPECIAL ARRANGEMENT

The mela was organised by the Small Farmer's Agri Business Consortium (SFAC), Government of India, in collaboration with the Watershed Development Department (WDD) and the Centre of Excellence for FPO (COE-FPO), Bengaluru. More than 90 stalls displaying various millets, coffee, rice, and spices have been set up at the fair to promote farmer empowerment by minimalising middleman interference and making agriculture a profitable enterprise.

Mr. Chaluvarayaswamy also said that while 486 Amrit FPOs were established during the tenure of the previous government, in 2024 - 25, the present State government allocated ₹21 crore for those FPOs. He also said that the government grants ₹18 lakh to FPOs for a period of three years for operational expenses while it grants ₹25 lakh for a period of five years to community based business organisations.

The buyers at the mela appreciated the event by saying that it was a good platform for startups to meet farmers directly.



ಕೃಷಿ ಉತ್ಪಾದಕ ಸಂಸ್ಥೆಗಳಿಂದ ₹1073 ಕೋಟಿ ವಹಿವಾಟು: ಸಚಿವ

1,472 ಕೃಷಿ ಉತ್ಪಾದಕ ಸಂಸ್ಥೆಗಳಿಂದ ಈ ಸಾಧನೆ: ಚಲುವ

2024-25ನೇ ಸಾಲಿನಲ್ಲಿ ₹21 ಕೋಟಿ ಅನುದಾನ




ವಿವಿಧ ಎಫ್. ಪಿ. ಓ ಗಳ ಬಗ್ಗೆ, ಅವುಗಳ ಜೋಡಣೆ ಹಾಗೂ ಉತ್ತಮ ಸಹಕಾರಕ್ಕೆ ಅಗತ್ಯವಿರುವ ಪ್ರಮುಖ ಸಂಪರ್ಕ ಮಾಹಿತಿಯನ್ನು ಒದಗಿಸುವ ಸಮಗ್ರ ಎಫ್. ಪಿ. ಓ ಡೈರೆಕ್ಟರಿ ಬಿಡುಗಡೆ ಮಾಡಲಾಯಿತು.






ವಿಶ್ವಬ್ಯಾಂಕ್ ಸಹಾಯಧನದಲ್ಲಿ ನಡೆಯುತ್ತಿರುವ ರಿವಾರ್ಡ್ ಯೋಜನೆಯಡಿಯಲ್ಲಿ ಆಯ್ಕೆಯಾದ ಎಫ್ ಪಿ ಓ ಗಳಿಗೆ ಮೌಲ್ಯ ಸರಪಳಿ ಅಭಿವೃದ್ಧಿ ಮತ್ತು ವ್ಯಾಪಾರ ವಹಿವಾಟು ಉತ್ತೇಜಿಸವ ನಿಟ್ಟಿನಲ್ಲಿ ಸಹಾಯಧನ ಮಂಜೂರಾತಿ ಪತ್ರಗಳನ್ನು ನೀಡಲಾಯಿತು.

## ಖರೀದಿದಾರ-ಮಾರಾಟಗಾರರ ಸಭೆ (B2B)

### ಉದ್ದೇಶ:

ರೈತ ಉತ್ಪಾದಕ ಸಂಸ್ಥೆಗಳು (FPOs) ಮತ್ತು ಖರೀದಿದಾರರ ನಡುವೆ ನೇರ ಮಾರುಕಟ್ಟೆ ಸಂಪರ್ಕವನ್ನು ಸುಲಭಗೊಳಿಸಿ, ನ್ಯಾಯವಾದ ಬೆಲೆ ಲಭ್ಯವಾಗುವಂತೆ ಮಾಡುವುದು ಮತ್ತು ಮಧ್ಯವರ್ತಿಗಳನ್ನು ಕಡಿಮೆ ಮಾಡುವುದು.

**ದಿನಾಂಕ ಮತ್ತು ಸ್ಥಳ:** ಮಾರ್ಚ್ 1, 2025, ಯುಎಚ್ಎಸ್ (ಬಿ) ಕ್ಯಾಂಪಸ್, ಬೆಂಗಳೂರು

**ಸಂಘಟಕರು:** SFAC, WDD, CoE-FPO, KAPEC

### ಪ್ರಮುಖ ಮುಖ್ಯಾಂಶಗಳು:

**ಭಾಗವಹಿಸಿದವರು:** 29 ಖರೀದಿದಾರರು, 88 ಎಫ್ ಪಿ ಓ ಗಳು

**ಉತ್ಪನ್ನಗಳು:** ಸಿರಿಧಾನ್ಯಗಳು, ಧಾನ್ಯಗಳು, ಎಣ್ಣೆ ಬೀಜಗಳು, ಮಸಾಲೆಗಳು, ಹಣ್ಣು-ತರಕಾರಿಗಳು, ಡೈರಿ ಮತ್ತು ಮೌಲ್ಯವರ್ಧಿತ ಉತ್ಪನ್ನಗಳು

**ಬಿ 2 ಬಿ (ವ್ಯಾಪಾರದಿಂದ ವ್ಯಾಪಾರಕ್ಕೆ) ಸಭೆಗಳು:** 65 ಅಧಿವೇಶನಗಳು, 59 ಒಪ್ಪಂದಗಳಿಗೆ ಸಹಿ

**ಒಟ್ಟು ವ್ಯಾಪಾರ:** 9,967.26 ಟನ್ ( ₹ 5,742.26 ಲಕ್ಷ)



# FPO ಮೇಳ 2025

## ಫಲಿತಾಂಶಗಳು:

- ಸುಧಾರಿತ ಬೆಲೆ ಬಗ್ಗೆ ಅರಿವು ಮತ್ತು ಮಾರುಕಟ್ಟೆ ಸಂಪರ್ಕಗಳು.
- ಗುಣ ಮಟ್ಟ ಮತ್ತು ಪ್ಯಾಕೇಜಿಂಗ್ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೆ.
- ಹೊಸ ವ್ಯಾಪಾರ ಅವಕಾಶಗಳನ್ನು ಗುರುತಿಸಲು ಸಹಕಾರಿ.
- ಗುಣ ಮಟ್ಟದ ಮಾನದಂಡಗಳು, ಪೂರೈಕೆ ನಿರಂತರತೆ, ಲಾಜಿಸ್ಟಿಕ್ಸ್ ಸಂಬಂಧಿತ ಸವಾಲುಗಳ ಬಗ್ಗೆ ಅರಿವು.

## ಶಿಫಾರಸುಗಳು:

- ಖರೀದಿದಾರರು ಮತ್ತು ಮಾರಾಟದಾರರ ನಡುವಿನ ಸಂವಹನವನ್ನು ಬಲಪಡಿಸುವುದು.
- ಮಾರುಕಟ್ಟೆ, ಸಮಾಲೋಚನೆ ಮತ್ತು ಗುಣಮಟ್ಟ ಭರವಸೆಯ ಬಗ್ಗೆ ತರಬೇತಿ ನಡೆಸುವುದು.
- ಪ್ರಾದೇಶಿಕ ಮಟ್ಟದಲ್ಲಿ B2B ಸಭೆಗಳನ್ನು ಹೆಚ್ಚಿಸಿಸುವುದು.
- ಸುಸ್ಥಿರ ಸಂವಹನಕ್ಕಾಗಿ ಕಾರ್ಯಕ್ರಮದ ನಂತರ ಅನುಸರಣೆ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವುದು.

## ಗಮನಾರ್ಹ ಅಂಶಗಳು

### ಪರಿಣಾಮಕಾರಿ ಪ್ಯಾನಲ್ ಚರ್ಚೆಗಳು:

ಎಫ್.ಪಿ.ಒ.ಗಳ ಬೆಳವಣಿಗೆ, ಆಡಳಿತ, ಮಾರುಕಟ್ಟೆ ಪ್ರವೇಶ, ಹಣಕಾಸು ಯೋಜನೆ ಮತ್ತು ರಫ್ತು ಅವಕಾಶಗಳಿಗೆ ಅಗತ್ಯವಾದ ಸಂಬಂಧಿತ ಹಾಗೂ ಮಹತ್ವದ ವಿಷಯಗಳನ್ನು ಒಳಗೊಂಡಿದ್ದವು.

### ಯಶಸ್ವಿ B2B ಸಭೆಗಳು:

ಎಫ್.ಪಿ.ಒಗಳು ಉತ್ತಮ ವ್ಯವಹಾರ ಸಂಬಂಧಗಳನ್ನು ರೂಪಿಸಲು, ಸಹಯೋಗಗಳನ್ನು ಅನ್ವೇಷಿಸಲು ಮತ್ತು ಮಾರುಕಟ್ಟೆ ಪಾಲುದಾರಿಕೆಗಳನ್ನು ಸುಧಾರಿಸಲು ಸಹಾಯಕವಾಗಿವೆ.

### 75+ ಮಳಿಗೆಗಳು:

ರೈತ ಮಾಲಿಕತ್ವದ ಉದ್ಯಮಗಳ ಸಾಮರ್ಥ್ಯವನ್ನು ಪ್ರತಿನಿಧಿಸುವ, ವಿವಿಧ ಪ್ರಾಂತ್ಯಗಳ ಎಫ್.ಪಿ.ಒ ಗಳಿಂದ ವೈವಿಧ್ಯಮಯ ಗುಣಮಟ್ಟದ ಉತ್ಪನ್ನಗಳನ್ನು ಆಕರ್ಷಕ ಬ್ರಾಂಡ್ಗಳ ಮೂಲಕ ಪ್ರದರ್ಶಿಸಲಾಯಿತು.

### ಅಂತರ-ಎಫ್.ಪಿ.ಒ ಜಾಲ ನಿರ್ಮಾಣ:

ಎಫ್.ಪಿ.ಒ-ಎಫ್.ಪಿ.ಒ ವ್ಯವಹಾರ, ಉತ್ತಮ ಕಲಿಕೆಗಳ ವಿನಿಮಯ ಮತ್ತು ಪರಸ್ಪರ ಬೆಳವಣಿಗೆ ವೃದ್ಧಿಸುವ ಉತ್ತಮ ಅವಕಾಶವಾಗಿತ್ತು.

ಇವರ ಸಹಯೋಗದೊಂದಿಗೆ:

SFAC
लघु कृषक
कृषि व्यापार संघ

FPO

WATERSHED DEVELOPMENT DEPARTMENT

CENTRE OF EXCELLENCE FOR FARMER PRODUCER ORGANIZATIONS

UNIVERSITY OF HORTICULTURAL SCIENCES BAGALKOT

ಇವರ ಸಹಕಾರದೊಂದಿಗೆ

THE WORLD BANK

NAFED

FDRVC
VALUE FOR INDIA

KAPPEC

NATIONAL CO-OPERATIVE DEVELOPMENT CORPORATION NEW DELHI

ट्राईफेड
TRIFED

NABARD

# ರೈತ ಉತ್ಪಾದಕ ಸಂಸ್ಥೆಗಳನ್ನು (ಎಫ್.ಪಿ.ಒ.) ಬಲಪಡಿಸುವಲ್ಲಿ ಮಾರುಕಟ್ಟೆ ಮತ್ತು ತಪಾಸಣೆ ನಿರ್ದೇಶನಾಲಯದ ಪಾತ್ರ

ರೈತ ಉತ್ಪಾದಕ ಸಂಸ್ಥೆಗಳು (ಎಫ್ಪಿಒಗಳು) ಭಾರತದಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರ ಸಬಲೀಕರಣಕ್ಕೆ ಪ್ರಮುಖ ಸಾಧನಗಳಾಗಿ ಹೊರಹೊಮ್ಮಿವೆ, ಮಾರುಕಟ್ಟೆಗಳನ್ನು ಸಾಮೂಹಿಕವಾಗಿ ಪ್ರವೇಶಿಸಲು, ಉತ್ತಮ ಬೆಲೆಗಳ ಬಗ್ಗೆ ಮಾತುಕತೆ ನಡೆಸಲು ಮತ್ತು ಮೌಲ್ಯವರ್ಧನೆಯ ಮೂಲಕ ಅವರ ಆದಾಯವನ್ನು ಹೆಚ್ಚಿಸಲು ವೇದಿಕೆಯನ್ನು ಒದಗಿಸುತ್ತಿವೆ. ಕಡಿಮೆ ಮಾರುಕಟ್ಟೆ ಪ್ರವೇಶ, ಕಳಪೆ ಚೌಕಾಸಿ ಶಕ್ತಿ ಮತ್ತು ಮೌಲ್ಯವರ್ಧನೆಗೆ ಸೀಮಿತ ಅವಕಾಶಗಳೊಂದಿಗೆ ಆಗಾಗ್ಗೆ ಹೆಣಗಾಡುತ್ತಿರುವ ಸಣ್ಣ ಹಿಡುವಳಿದಾರ ರೈತರು ಎದುರಿಸುತ್ತಿರುವ ಸವಾಲುಗಳನ್ನು ಪರಿಹರಿಸುವಲ್ಲಿ ಈ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ. ಆದಾಗ್ಯೂ, ಎಫ್ಪಿಒಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು, ಅಗತ್ಯ ಸಂಪನ್ಮೂಲಗಳು, ಮೂಲಸೌಕರ್ಯ ಮತ್ತು ನೀತಿ ಪರಿಸರವನ್ನು ಒದಗಿಸುವ ದೃಢವಾದ, ಉತ್ತಮ ಸಂಯೋಜಿತ ಮತ್ತು ಬೆಂಬಲಿತ ಕೃಷಿ-ಮಾರುಕಟ್ಟೆ ಪರಿಸರ ವ್ಯವಸ್ಥೆಯ ಅಗತ್ಯವಿದೆ.

## ಎಫ್.ಪಿ.ಒ.ಗಳ ಶಕ್ತಿವರ್ಧನೆಗೆ ಡಿಎಂಐಯ ಪ್ರಮುಖ ಪಾತ್ರ

ಭಾರತ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯದ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಮಾರುಕಟ್ಟೆ ಮತ್ತು ತಪಾಸಣೆ ನಿರ್ದೇಶನಾಲಯ (ಡಿಎಂಐ) ಈ ಪರಿಸರ ವ್ಯವಸ್ಥೆಯನ್ನು ಬೆಳೆಸುವಲ್ಲಿ ಮತ್ತು ಎಫ್ಪಿಒಗಳ ಕಾರ್ಯಾಚರಣೆ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ತನ್ನ ಬಹುಮುಖಿ ಉಪಕ್ರಮಗಳ ಮೂಲಕ, ಡಿಎಂಐ ಮಾರುಕಟ್ಟೆ ಪ್ರವೇಶವನ್ನು ಸುಗಮಗೊಳಿಸುತ್ತದೆ, ಮಾರುಕಟ್ಟೆ ದಕ್ಷತೆಯನ್ನು ಸುಧಾರಿಸುತ್ತದೆ ಮತ್ತು ಹೆಚ್ಚುತ್ತಿರುವ ಸ್ಪರ್ಧಾತ್ಮಕ ಕೃಷಿ ಮಾರುಕಟ್ಟೆಯಲ್ಲಿ ಎಫ್ಪಿಒಗಳು ಅಭಿವೃದ್ಧಿ ಹೊಂದಲು ಅಗತ್ಯವಾದ ಗುಣಮಟ್ಟದ ಮಾನದಂಡಗಳನ್ನು ಖಚಿತಪಡಿಸುತ್ತದೆ. ಪ್ರಮುಖ ಉಪಕ್ರಮಗಳಲ್ಲಿ ಒಂದು ಅಗ್ಮಾರ್ಕ್ನೆಟ್ ಪ್ಲಾಟ್ಫಾರ್ಮ್, ಇದು ನೈಜ-ಸಮಯದ ಮಾರುಕಟ್ಟೆ ಮಾಹಿತಿಯನ್ನು ಒದಗಿಸುತ್ತದೆ, ಎಫ್. ಪಿ. ಓ. ಗಳಿಗೆ ತಮ್ಮ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಬೆಲೆಗಳ ಬಗ್ಗೆ ಮಾಹಿತಿಯುತ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ಸಮಯೋಚಿತ ಮತ್ತು ನಿಖರವಾದ ಮಾರುಕಟ್ಟೆ ಪ್ರವೇಶವನ್ನು ಹೊಂದುವ ಮೂಲಕ, ಎಫ್ಪಿಒಗಳು ತಮ್ಮ ಮಾರಾಟ ತಂತ್ರಗಳನ್ನು ಉತ್ತಮಗೊಳಿಸಬಹುದು ಮತ್ತು ತಮ್ಮ ಸದಸ್ಯರಿಗೆ ಉತ್ತಮ ಬೆಲೆಗಳನ್ನು ಪಡೆಯಬಹುದು.

## ಅಗ್ಮಾರ್ಕ್ ಪ್ರಮಾಣೀಕರಣ: ಎಫ್.ಪಿ.ಒ.ಗಳಿಗೆ ವಿಶ್ವಾಸಾರ್ಹತೆಯ ಮುದ್ರೆ

ಎಫ್. ಪಿ. ಓ. ಗಳಿಗೆ ಅಗ್ಮಾರ್ಕ್ ಪ್ರಮಾಣೀಕರಣವನ್ನು ಉತ್ತೇಜಿಸುವಲ್ಲಿ ಡಿ.ಎಂ.ಐ. ಪ್ರಮುಖ ಪಾತ್ರ ವಹಿಸುತ್ತದೆ, ಅವರ ಉತ್ಪನ್ನಗಳು ಉತ್ತಮ ಗುಣಮಟ್ಟದ ಮಾನದಂಡಗಳನ್ನು ಪೂರೈಸುತ್ತವೆ ಎಂದು ಖಚಿತಪಡಿಸುತ್ತದೆ. ಈ ಪ್ರಮಾಣೀಕರಣವು ಮಾರುಕಟ್ಟೆಯಲ್ಲಿ ಎಫ್ಪಿಒಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವುದಲ್ಲದೆ, ಗುಣಮಟ್ಟ-ಭರವಸೆಯ ಉತ್ಪನ್ನಗಳನ್ನು ಬಯಸುವ ಪ್ರೀಮಿಯಂ ಮಾರುಕಟ್ಟೆಗಳಿಗೆ ಹೊಸ ಮಾರ್ಗಗಳನ್ನು ತೆರೆಯುವ ಮೂಲಕ ಅವುಗಳ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ. ಇದಲ್ಲದೆ, ಕೃಷಿ ಮಾರುಕಟ್ಟೆ ಮೂಲಸೌಕರ್ಯ (ಎಎಂಐ) ಯೋಜನೆಯ ಮೂಲಕ ಡಿಎಂಐನ ಬೆಂಬಲವು ಕೋಲ್ಡ್ ಸ್ಟೋರೇಜ್ ಸೌಲಭ್ಯಗಳು ಮತ್ತು ಗ್ರಾಮೀಣ ಮಾರುಕಟ್ಟೆಗಳಂತಹ ಅಗತ್ಯ ಮೂಲಸೌಕರ್ಯಗಳ ಅಭಿವೃದ್ಧಿಗೆ ಸಹಾಯ ಮಾಡುತ್ತದೆ, ಇದು ಸುಗ್ಗಿಯ ನಂತರದ ನಷ್ಟವನ್ನು ಕಡಿಮೆ ಮಾಡಲು, ಉತ್ಪನ್ನದ ಶೇಕರಣ ಅವಧಿಯನ್ನು ಸುಧಾರಿಸಲು ಮತ್ತು ಕೃಷಿ ಉತ್ಪನ್ನಗಳಿಗೆ ಮೌಲ್ಯವನ್ನು ಸೇರಿಸಲು ನಿರ್ಣಾಯಕವಾಗಿದೆ.

## ಸಮರ್ಥನೆ, ಸಾಮರ್ಥ್ಯ ಮತ್ತು ಮೌಲ್ಯವರ್ಧನೆಗೆ ಡಿಎಂಐಯ ಸಕ್ರಿಯ ಪಾತ್ರ

ಮೂಲಸೌಕರ್ಯ ಅಭಿವೃದ್ಧಿಯ ಜೊತೆಗೆ, ಡಿಎಂಐ ತನ್ನ ಕ್ಷೇತ್ರ ಕಚೇರಿಗಳ ಮೂಲಕ ಎಫ್ಪಿಒಗಳ ಮೇಲ್ವಿಚಾರಣೆ ಮತ್ತು ಆಸರೆಯಾಗಿ ನೇರ ಬೆಂಬಲವನ್ನು ಒದಗಿಸುತ್ತದೆ, ಉತ್ತಮ ಅಭ್ಯಾಸಗಳು, ಕಾರ್ಯಾಚರಣೆಯ ತಂತ್ರಗಳು ಮತ್ತು ನಿರ್ವಹಣೆಯ ಬಗ್ಗೆ ಮಾರ್ಗದರ್ಶನವನ್ನು ನೀಡುತ್ತದೆ. ಈ ಬೆಂಬಲವು ಎಫ್ಪಿಒಗಳು ತಮ್ಮ ಅಭಿವೃದ್ಧಿಯಗೆ ಆರಂಭಿಕ ಹಂತಗಳಲ್ಲಿ ಸವಾಲುಗಳನ್ನು ನಿವಾರಿಸಬಹುದು ಮತ್ತು ತಮ್ಮ ಕಾರ್ಯಾಚರಣೆಗಳನ್ನು ಪರಿಣಾಮಕಾರಿಯಾಗಿ ಹೆಚ್ಚಿಸಬಹುದು ಎಂದು ಖಚಿತಪಡಿಸುತ್ತದೆ. ಮಾರುಕಟ್ಟೆ ಪ್ರವೇಶಕ್ಕೆ ಅಡೆತಡೆಗಳನ್ನು ಕಡಿಮೆ ಮಾಡುವ, ನ್ಯಾಯಯುತ ವ್ಯಾಪಾರ ಅಭ್ಯಾಸಗಳನ್ನು ಖಚಿತಪಡಿಸಿಕೊಳ್ಳುವ ಮತ್ತು ಸಕ್ರಿಯಗೊಳಿಸುವ ನಿಯಂತ್ರಕ ಚೌಕಟ್ಟನ್ನು ಬೆಳೆಸುವತ್ತ ಗಮನ ಹರಿಸಿ, ಎಫ್ಪಿಒಗಳು ಬೆಳೆಯಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುವ ಗುರಿಯನ್ನು ಹೊಂದಿರುವ ನೀತಿ ಸುಧಾರಣೆಗಳನ್ನು ಡಿಎಂಐ ಪ್ರತಿಪಾದಿಸುತ್ತದೆ. ಎಫ್. ಪಿ. ಓ. ಗಳ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲು, ಡಿಎಂಐ ವಿವಿಧ ಸಾಮರ್ಥ್ಯ-ನಿರ್ಮಾಣ ಕಾರ್ಯಕ್ರಮಗಳನ್ನು ನೀಡುತ್ತದೆ, ಅವುಗಳ ಕಾರ್ಯಾಚರಣೆಯ ದಕ್ಷತೆ, ಹಣಕಾಸು ನಿರ್ವಹಣೆ ಮತ್ತು ಮಾರ್ಕೆಟಿಂಗ್ ತಂತ್ರಗಳನ್ನು ಸುಧಾರಿಸುವತ್ತ ಗಮನ ಹರಿಸುತ್ತದೆ. ಈ ಕಾರ್ಯಕ್ರಮಗಳನ್ನು ಎಫ್ಪಿಒಗಳನ್ನು ತಮ್ಮ ಆಂತರಿಕ ಪ್ರಕ್ರಿಯೆಗಳನ್ನು ಉತ್ತಮಗೊಳಿಸಲು ಮತ್ತು ಅವುಗಳ ಸುಸ್ಥಿರತೆಯನ್ನು ಹೆಚ್ಚಿಸಲು ಅಗತ್ಯವಾದ ಜ್ಞಾನ ಮತ್ತು ಕೌಶಲ್ಯಗಳೊಂದಿಗೆ ಸಬಲೀಕರಣಗೊಳಿಸಲು ವಿನ್ಯಾಸಗೊಳಿಸಲಾಗಿದೆ. ಹೆಚ್ಚುವರಿಯಾಗಿ, ನೇರ ಮಾರುಕಟ್ಟೆ ಮಾರ್ಗಗಳನ್ನು ಉತ್ತೇಜಿಸುವ ಮೂಲಕ, ಎಫ್ಪಿಒಗಳು ಮಧ್ಯವರ್ತಿಗಳನ್ನು ಬೈಪಾಸ್ ಮಾಡಬಹುದು ಎಂದು ಡಿಎಂಐ ಖಚಿತಪಡಿಸುತ್ತದೆ, ಇದು ಮೌಲ್ಯ ಸರಪಳಿಯ ಹೆಚ್ಚಿನ ಪಾಲನ್ನು ವಶಪಡಿಸಿಕೊಳ್ಳಲು ಮತ್ತು ರೈತರಿಗೆ ನೇರವಾಗಿ ಉತ್ತಮ ಬೆಲೆಗಳನ್ನು ತಲುಪಿಸಲು ಅನುವು ಮಾಡಿಕೊಡುತ್ತದೆ. ಈ ಸಮಗ್ರ ಪ್ರಯತ್ನಗಳ ಮೂಲಕ, ಎಫ್ಪಿಒಗಳ ಕಾರ್ಯಸಾಧ್ಯತೆ ಮತ್ತು ಸ್ಪರ್ಧಾತ್ಮಕತೆಯನ್ನು ಬಲಪಡಿಸುವಲ್ಲಿ ಡಿಎಂಐ ನಿರ್ಣಾಯಕ ಪಾತ್ರ ವಹಿಸುತ್ತದೆ, ಅವು ಸ್ವಾವಲಂಬಿ, ಮಾರುಕಟ್ಟೆ ಆಧಾರಿತ ಘಟಕಗಳಾಗಲು ಸಹಾಯ ಮಾಡುತ್ತದೆ. ಇದು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಸುಸ್ಥಿರ ಬೆಳವಣಿಗೆ ಮತ್ತು ಸುಧಾರಿತ ಜೀವನೋಪಾಯವನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. ಮಾರುಕಟ್ಟೆ ಪ್ರವೇಶ ಮತ್ತು ಗುಣಮಟ್ಟದ ಪ್ರಮಾಣೀಕರಣವನ್ನು ಸುಗಮಗೊಳಿಸುವುದರಿಂದ ಹಿಡಿದು ಮೂಲಸೌಕರ್ಯ ಅಭಿವೃದ್ಧಿ ಮತ್ತು ನೀತಿ ಸಮರ್ಥನೆಯವರೆಗೆ ಡಿಎಂಐನ ಮಧ್ಯಸ್ಥಿಕೆಗಳು ಭಾರತದ ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಇದನ್ನು ಮೂಲಾಧಾರವಾಗಿ ಇರಿಸುತ್ತವೆ. ಡಿಎಂಐ ಮತ್ತು ಎಫ್ಪಿಒಗಳ ಸಾಮೂಹಿಕ ಪ್ರಯತ್ನಗಳು ಕೃಷಿ ಪರಿವರ್ತನೆಯನ್ನು ಮುಂದುವರಿಸುತ್ತವೆ, ಭಾರತದ ಒಟ್ಟಾರೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಗುರಿಗಳಿಗೆ ಕೊಡುಗೆ ನೀಡುತ್ತವೆ.

# “ಝೇಂಕಾರ”

## ತೋಟಗಾರಿಕೆ ಇಲಾಖೆಯ ಜೇನುತುಪ್ಪ ಬ್ರ್ಯಾಂಡ್

ಕರ್ನಾಟಕ ರಾಜ್ಯವು ಉತ್ತಮ ಗುಣಮಟ್ಟದ ಜೇನು ತುಪ್ಪ ಉತ್ಪಾದನೆಗೆ ಅಗತ್ಯವಿರುವ ನೈಸರ್ಗಿಕ ಸಂಪತ್ತನ್ನು ಹೊಂದಿದ್ದು, ಕೊಡಗು, ರಾಜ್ಯದ ಪಶ್ಚಿಮಘಟ್ಟ ಪ್ರದೇಶಗಳು ಹಾಗೂ ಕರಾವಳಿ ಪ್ರದೇಶಗಳಲ್ಲಿ ದೊರೆಯುವ ಜೇನು ತುಪ್ಪವು ಅನನ್ಯರುಚಿ, ಸುವಾಸನೆ ಹಾಗೂ ಔಷಧೀಯ ಗುಣಗಳಿಂದ ಹೆಸರುವಾಸಿಯಾಗಿದೆ. ಜೇನುತುಪ್ಪವು ಪರಿಪೂರ್ಣ ಆಹಾರವಾಗಿರುವುದರಿಂದ ಇದರ ಬಳಕೆಯನ್ನು ಉತ್ತೇಜಿಸುವ ಅಗತ್ಯವಿದೆ. ರಾಜ್ಯದ ಜೇನುತುಪ್ಪವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಜನಪ್ರಿಯಗೊಳಿಸಲು, ಗ್ರಾಹಕರಿಗೆ ಗುಣಮಟ್ಟದ ಜೇನುತುಪ್ಪ ದೊರಕುವಂತೆ ಮಾಡಲು ಹಾಗೂ ಜೇನು ಕೃಷಿಕರ ಆರ್ಥಿಕ ಮಟ್ಟ ಹೆಚ್ಚಿಸಲು ಇಲಾಖೆಯು ಕ್ರಮ ವಹಿಸಿದೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಜೇನುತುಪ್ಪಕ್ಕೆ ತೋಟಗಾರಿಕೆ ಇಲಾಖೆಯು “ಝೇಂಕಾರ” ಎಂಬ ಬ್ರ್ಯಾಂಡ್ ಹೆಸರು, ಜೀವನೋಲ್ಲಾಸಕ್ಕೆ ಜೇನು ಎಂಬ ಟ್ಯಾಗ್‌ಲೈನ್ ಮತ್ತು ಲೋಗೋವನ್ನು ಅಭಿವೃದ್ಧಿ ಪಡಿಸಿ ಟ್ರೇಡ್ ಮಾರ್ಕ್ ರಿಜಿಸ್ಟ್ರಿಯಿಂದ ಅಧಿಕೃತವಾಗಿ ಅನುಮೋದನೆ ಪಡೆಯಲಾಗಿದೆ. ತೋಟಗಾರಿಕೆ ಇಲಾಖೆಯು ಸದರಿ ಬ್ರ್ಯಾಂಡ್‌ನ ಮಾಲೀಕತ್ವವನ್ನು ಹೊಂದಿರುತ್ತದೆ. ಜೇನುತುಪ್ಪ ಉತ್ಪಾದಕರು ಮತ್ತು ಸಂಗ್ರಾಹಕರು ಷರತ್ತು ಮತ್ತು ನಿಬಂಧನೆಗಳೊಂದಿಗೆ ತೋಟಗಾರಿಕೆ ಇಲಾಖೆಯ ಮಾಲೀಕತ್ವದ ”ಝೇಂಕಾರ” ಬ್ರ್ಯಾಂಡ್ ಹೆಸರು ಮತ್ತು ಲೋಗೋವನ್ನು ಬಳಸಿಕೊಂಡು ಜೇನುತುಪ್ಪ ಮತ್ತು ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವಿರುತ್ತದೆ. ರೈತ ಉತ್ಪಾದಕ ಸಂಸ್ಥೆಗಳು ತಮ್ಮ ಜೇನು ಕೃಷಿಕ ಸದಸ್ಯರು ಉತ್ಪಾದಿಸುವ ಉತ್ತಮ ಗುಣಮಟ್ಟದ ಜೇನುತುಪ್ಪವನ್ನು “ಝೇಂಕಾರ” ಬ್ರ್ಯಾಂಡ್ ಹೆಸರಿನಲ್ಲಿ ಮಾರಾಟ ಮಾಡಲು ಅಪರ ನಿರ್ದೇಶಕರು, ತಾಳೆಬೆಳೆ ವಿಭಾಗ, ತೋಟಗಾರಿಕೆ ನಿರ್ದೇಶನಾಲಯ, ಲಾಲ್ ಬಾಗ್, ಬೆಂಗಳೂರು ಇವರನ್ನು ಹಾಗೂ ಜಿಲ್ಲಾ ತೋಟಗಾರಿಕೆ ಉಪ ನಿರ್ದೇಶಕರ ಕಛೇರಿಗಳನ್ನು ಸಂಪರ್ಕಿಸಲು ಕೋರಿದೆ.



**ಇ- ಮೇಲ್:** additionaldirectoropdp@gmail.com

## ರೈತರ ಸಮೂಹೀಕರಣ - ಎಫ್‌ಪಿಒಗಳ ಪ್ರೋತ್ಸಾಹ ವಿಷಯಕ್ಕೆ SKOCH GOVERNANCE AWARD-2024



ತೋಟಗಾರಿಕೆ ರಂಗದಲ್ಲಿ ರೈತರು ಅದರಲ್ಲೂ ವಿಶೇಷವಾಗಿ ಸಣ್ಣ ಮತ್ತು ಅತಿ ಸಣ್ಣ ರೈತರು ತೋಟಗಾರಿಕೆ ಬೆಳೆಗಳ ಉತ್ಪಾದನೆ, ತಾಂತ್ರಿಕತೆ, ಪರಿಕರಗಳ ಸರಬರಾಜು, ಮಾರುಕಟ್ಟೆ, ಹೂಡಿಕೆ ಇತ್ಯಾದಿಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಅನೇಕ. ಇಂತಹ ಸಮಸ್ಯೆಗಳನ್ನು ಸಮರ್ಥವಾಗಿ ಪರಿಹರಿಸಲು ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಘಟಿಸಿ, ಸ್ವಯಂ ಮಾಲಿಕತ್ವದ ರೈತ ಉತ್ಪಾದಕರ ಸಂಸ್ಥೆಗಳನ್ನು (FPO) ಸ್ಥಾಪಿಸಲು ಕ್ರಮವಹಿಸಲಾಗಿರುತ್ತದೆ. ಇಲ್ಲಿಯವರೆಗೆ ರಾಜ್ಯದಲ್ಲಿ 1466 FPOಗಳನ್ನು ವಿವಿಧ ಇಲಾಖೆಗಳ ಹಾಗೂ ಸಂಘ/ಸಂಸ್ಥೆಗಳ ಮುಖಾಂತರ ಸ್ಥಾಪಿಸಲಾಗಿರುತ್ತದೆ.ಇದರ ಪೈಕಿ 205 FPOಗಳು ತೋಟಗಾರಿಕೆ ಇಲಾಖೆವತಿಯಿಂದ ಉತ್ತೇಜಿಸಲಾಗಿದೆ. ಸದರಿ ಸಂಸ್ಥೆಗಳ ಬಲವರ್ಧನೆಗಾಗಿ ತೋಟಗಾರಿಕೆ ಇಲಾಖೆಯ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು (ದುಡಿಯುವ ಬಂಡವಾಳ ಒದಗಿಸುವುದು, ಕೃಷಿ ಯಂತ್ರಧಾರೆ ಕೇಂದ್ರ, ಮೂಲಭೂತ ಸೌಕರ್ಯ ನಿರ್ಮಾಣ, ರೈತ ಉತ್ಪಾದಕರ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ರಚನೆ, ಎಫ್ ಪಿ ಒ-ಕೆವಿಕೆ ಸಂಪರ್ಕ ಇತ್ಯಾದಿ) ಹಮ್ಮಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ರಮಗಳ ಸದುಪಯೋಗ ಪಡೆದ ಎಫ್ ಪಿ ಒಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಕಾರ್ಯಕ್ರಮಗಳಲ್ಲಿ ಒಂದಾದ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ರಚನೆಯನ್ನು ರಾಷ್ಟ್ರ ಮಟ್ಟದಲ್ಲಿಯೂ ಗುರುತಿಸಲಾಗಿದೆ. ಈ ಹಿನ್ನಲೆಯಲ್ಲಿ ಇಲಾಖೆಯ ಕಾರ್ಯಗಳನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸಲು SKOCH Governance Award- 2024ನಲ್ಲಿ “Collectivisation of farmers - Promotion of FPOs” ವಿಷಯದ ನಾಮ ನಿರ್ದೇಶನ ಮಾಡಲಾಗಿರುತ್ತದೆ. SKOCH Governance Award, Silver category ಅಡಿಯಲ್ಲಿ Collectivisation of farmers - Promotion of FPOs” ವಿಷಯಕ್ಕೆ ತೋಟಗಾರಿಕೆ ಇಲಾಖೆಗೆ ಪ್ರಶಸ್ತಿ ಸಂದಿದ್ದು, ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದಿನಾಂಕ:29.03.2025 ರಂದು ಸಿಲ್ವರ್ ಓಕ್ ಹಾಲ್,ನವದೆಹಲಿಯಲ್ಲಿ ಆಯೋಜಿಸಲಾಗಿದ್ದು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಿರ್ದೇಶಕರು ಮತ್ತು ತೋಟಗಾರಿಕೆ ಇಲಾಖೆಯವರು ಪ್ರಶಸ್ತಿಯನ್ನು ಸ್ವೀಕರಿಸಿರುತ್ತಾರೆ.

# ಕರ್ನಾಟಕ ರಾಜ್ಯದಲ್ಲಿ ಎಫ್ ಪಿ ಒ ಗಳಿಗೆ ಮಾದರಿಯಾದ ಸಹಜ ಸಮೃದ್ಧ: ಸಾವಯವ ಮಾರುಕಟ್ಟೆಯಲ್ಲಿ ಒಂದೂವರೆ ದಶಕಗಳ ಪಯಣ

Sahaja organics
An Organic Farmers Initiative




## ಹಿನ್ನೆಲೆ...

ದೇಶದಲ್ಲಿ ದೇಸಿ ಬೀಜ ಸಂರಕ್ಷಣೆ ಮತ್ತು ಸಾವಯವ ಕೃಷಿಯನ್ನು ಉತ್ತೇಜಿಸುತ್ತಿರುವ “ಸಹಜ ಸಮೃದ್ಧ ಸಾವಯವ ಕೃಷಿಕರ ಬಳಗ”ವು 2010ರಲ್ಲಿ ಸಹಜ ಆರ್ಗ್ಯಾನಿಕ್ಸ್ ಕಂಪನಿಯನ್ನು ಹುಟ್ಟುಹಾಕಿತು. ಸಾವಯವ ಕೃಷಿಕರಿಗೆ ಮಾರುಕಟ್ಟೆ ಭರವಸೆ ಮತ್ತು ಗ್ರಾಹಕರಿಗೆ ಶುದ್ಧ ಆಹಾರ ಪೂರೈಕೆ ಕಂಪನಿಯ ಧ್ಯೇಯವಾಗಿದೆ. ಕೃಷಿ ಜೀವವೈವಿಧ್ಯ ಸಂರಕ್ಷಣೆ, ಸಾವಯವ ಕೃಷಿಗೆ ಉತ್ತೇಜನ ಮತ್ತು ಸುಸ್ಥಿರ ಹಳ್ಳಿಗಳನ್ನು ಕಟ್ಟುವುದು ಕಂಪನಿಯ ಗುರಿ. ಸಾವಯವ ಕೃಷಿಕರ ಮಾಲೀಕತ್ವ ಹಾಗೂ ವೃತ್ತಿಪರರು ನಿರ್ವಹಣೆ ಮಾಡುತ್ತಿರುವುದು ಈ ಕಂಪನಿಯ ಯಶಸ್ಸಿನ ಮೂಲವಾಗಿದೆ. ಕಳೆದ 15 ವರ್ಷಗಳಿಂದ ವಿಷಮುಕ್ತ ಆಹಾರವನ್ನು ಗ್ರಾಹಕರಿಗೆ ವಿತರಿಸುವ ದೊಡ್ಡ ಮಾರಾಟ ಜಾಲವನ್ನು ‘ಸಹಜ ಆರ್ಗ್ಯಾನಿಕ್ಸ್’ ಸೃಷ್ಟಿಸಿಕೊಂಡಿದೆ.

ಶ್ರೇಷ್ಠ ಗುಣಮಟ್ಟದ ಸಾವಯವ ಉತ್ಪನ್ನಗಳನ್ನು ಸಾವಯವ ಕೃಷಿಕರು ಹಾಗೂ ಸಾವಯವ ಉತ್ಪಾದಕ ಸಂಘಗಳು ಪ್ರತಿದಿನ ಪೂರೈಸುತ್ತಾರೆ. ತಾಜಾ ಹಣ್ಣು-ತರಕಾರಿ, ದೇಸಿ ಅಕ್ಕಿ ಹಾಗೂ ಸಿರಿಧಾನ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಗ್ರಾಹಕರಿಗೆ ವಿತರಿಸುತ್ತಿರುವ ಕಂಪನಿಗಳಲ್ಲಿ ‘ಸಹಜ ಆರ್ಗ್ಯಾನಿಕ್ಸ್’ ಅಗ್ರಸ್ಥಾನದಲ್ಲಿದೆ.



ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಯುವ ಪದಾರ್ಥಗಳನ್ನು ಗ್ರಾಹಕರಿಗೆ ವಿತರಿಸುವುದು ರೈತರಿಗೆ ಬಹು ದೊಡ್ಡ ಸವಾಲು. ಪ್ರಾಕೃತಿಕ ಬೇಸಾಯ ವಿಧಾನಗಳನ್ನು ಅನುಸರಿಸಿ, ನೆಲ- ಜಲ- ಗಾಳಿ ಮಾಲಿನ್ಯವಾಗದಂತೆ ಕೃಷಿ ಮಾಡುತ್ತಲೇ, ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಸಾವಯವ ಕೃಷಿಕರು ದಶಕಗಳಿಂದಲೂ ನಿರ್ವಹಿಸುತ್ತ ಬಂದಿದ್ದಾರೆ. ಆದರೆ ವಿಷಮುಕ್ತ ಪದಾರ್ಥಗಳಿಗೆ ಪ್ರತ್ಯೇಕ ಮಾರುಕಟ್ಟೆ ಕಲ್ಪಿಸುವುದು ಅವರಿಗೆ ಕಷ್ಟದ ಹಾದಿಯಾಗಿದೆ. ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆಯುವ ಪದಾರ್ಥಗಳನ್ನು ಗ್ರಾಹಕರಿಗೆ ವಿತರಿಸುವುದು ರೈತರಿಗೆ ಬಹು ದೊಡ್ಡ ಸವಾಲು. ಪ್ರಾಕೃತಿಕ ಬೇಸಾಯ ವಿಧಾನಗಳನ್ನು ಅನುಸರಿಸಿ, ನೆಲ- ಜಲ- ಗಾಳಿ ಮಾಲಿನ್ಯವಾಗದಂತೆ ಕೃಷಿ ಮಾಡುತ್ತಲೇ, ಆಹಾರ ಪದಾರ್ಥಗಳನ್ನು ಗ್ರಾಹಕರಿಗೆ ತಲುಪಿಸುವ ಮಹತ್ತರ ಜವಾಬ್ದಾರಿಯನ್ನು ಸಾವಯವ ಕೃಷಿಕರು ದಶಕಗಳಿಂದಲೂ ನಿರ್ವಹಿಸುತ್ತ ಬಂದಿದ್ದಾರೆ. ಆದರೆ ವಿಷಮುಕ್ತ ಪದಾರ್ಥಗಳಿಗೆ ಪ್ರತ್ಯೇಕ ಮಾರುಕಟ್ಟೆ ಕಲ್ಪಿಸುವುದು ಅವರಿಗೆ ಕಷ್ಟದ ಹಾದಿಯಾಗಿದೆ.



## ಕಂಪನಿಯ ವೈಶಿಷ್ಟ್ಯಗಳು...

‘ಸಹಜ ಆರ್ಗ್ಯಾನಿಕ್ಸ್’ ಕರ್ನಾಟಕದ ಮೊದಲ ಸಾವಯವ ಉತ್ಪಾದಕರ ಕಂಪನಿ ಎಂಬುದು ಹೆಮ್ಮೆಯ ವಿಷಯ. ಬೆಂಗಳೂರಿನ ವಿ.ವಿ.ಪುರಂ ಬಳಿಯ ಪುಟ್ಟ ಸ್ಥಳದಲ್ಲಿ ಆರಂಭವಾಗಿ ಪ್ರಸ್ತುತ ದೇಶದ 18ಕ್ಕೂ ಹೆಚ್ಚು ರಾಜ್ಯಗಳಲ್ಲಿ ಉತ್ಪನ್ನಗಳ ಮಾರಾಟ ಜಾಲವನ್ನು ಸೃಷ್ಟಿಸಿಕೊಂಡಿದೆ. ಆರಂಭದ ಕೆಲವು ವರ್ಷ ಕೆಲವೇ ಲಕ್ಷಗಳ ವ್ಯಾಪಾರ ನಡೆಸುತ್ತಿದ್ದು ಈಗ ವಾರ್ಷಿಕ 28 ಕೋಟಿಗೂ ಅಧಿಕ ವಹಿವಾಟು ನಡೆಸುವ ಹಂತಕ್ಕೆ ಬೆಳೆದಿದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರತಿವರ್ಷ ತನಗೆ ಸರಕುಗಳನ್ನು ಪೂರೈಸುವ ರೈತರಿಗೆ ಕಂಪನಿಯ ಲಾಭದಲ್ಲಿ ಸ್ವಲ್ಪ ಭಾಗವನ್ನು ಕಾಯ್ದಿಟ್ಟ ಬೆಲೆ ರೂಪದಲ್ಲಿ ವಿತರಣೆ ಮಾಡುತ್ತಿದೆ.

# ಎಫ್. ಪಿ. ಒ ಗಳ ಯಶಸ್ಸಿನ ಧ್ವನಿಗಳು



ಈ ಹಿನ್ನೆಲೆಯನ್ನು ಪರಿಗಣಿಸಿ, ಸಾವಯವ ರೈತರ ಆದಾಯ ವೃದ್ಧಿಸುವ ಜತೆಗೆ ಗ್ರಾಹಕರಿಗೆ ಶುದ್ಧ ಆಹಾರವನ್ನು ಒದಗಿಸುವ ಧ್ಯೇಯದೊಂದಿಗೆ 2010ರಲ್ಲಿ 'ಸಹಜ ಸಮೃದ್ಧ ಸಾವಯವ ರೈತ ಉತ್ಪಾದಕ ಕಂಪನಿ'ಸ್ಥಾಪನೆಯಾಯಿತು. ಇಲ್ಲಿ ಸಾವಯವ ಕೃಷಿಕರೇ ಕಂಪನಿಯ ಷೇರುದಾರರು. ಆದರೆ ಮಾರುಕಟ್ಟೆಯನ್ನು ನುರಿತ ತಜ್ಞರು ಮತ್ತು ವೃತ್ತಿಪರರು ನಿರ್ವಹಿಸುತ್ತಾರೆ. 'ಸಹಜ ಆರ್ಗ್ಯಾನಿಕ್ಸ್' ಹೆಸರಿನಲ್ಲಿ ಕಂಪನಿಯು ತನ್ನ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದೆ. ವೈವಿಧ್ಯಮಯ ಹಾಗೂ ಪೌಷ್ಟಿಕ ಆಹಾರ ಪದಾರ್ಥಗಳನ್ನು ಸುಮಾರು 1,500 ರೈತರು ಹಾಗೂ 20 ಸಾವಯವ ಉತ್ಪಾದಕ ಗುಂಪುಗಳು ಕಂಪನಿಗೆ ಪೂರೈಸುತ್ತಾರೆ. ಆಹಾರ ಉತ್ಪನ್ನಗಳನ್ನು `ಪರಿಸರಸ್ನೇಹಿ ವಿಧಾನದಲ್ಲೇ ಬೆಳೆಸಲಾಗಿದೆ' ಎಂದು ದೃಢೀಕರಿಸುವ ಸಾವಯವ ಪ್ರಮಾಣೀಕರಣ ಪ್ರಕ್ರಿಯೆಯನ್ನು ಸಹಜ ಆರ್ಗ್ಯಾನಿಕ್ಸ್ ಕಳೆದ 15 ವರ್ಷಗಳಿಂದ ನಿರ್ವಹಿಸಿಕೊಂಡು ಬಂದಿದೆ. ವೈಯಕ್ತಿಕ ಹಾಗೂ ರೈತ ಗುಂಪುಗಳಲ್ಲಿ ಈ ಪ್ರಮಾಣೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ಸಾವಯವ ಪ್ರಮಾಣಪತ್ರವನ್ನು ಹೊಂದಿದ ರೈತರ ಉತ್ಪನ್ನಗಳಿಗೆ ಅಧಿಕ ದರ ಕೂಡ ಸಿಗುತ್ತಿದೆ.

### ಪ್ರಧಾನಿ ಅವರಿಂದ ಶ್ಲಾಘನೆ....

ರೈತರನ್ನು ಗ್ರಾಹಕರೊಂದಿಗೆ ನೇರವಾಗಿ ಸಂಪರ್ಕಿಸುವ ಕಂಪನಿಯ ಮಾದರಿಯು ಗೌರವಾನ್ವಿತ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರ ಗಮನವನ್ನು ಸೆಳೆದಿದ್ದು, ಅವರು ಜೂನ್ 24, 2018 ರಂದು ತಮ್ಮ 'ಮನ್ ಕಿ ಬಾತ್' ರೇಡಿಯೋ ಪ್ರಸಾರದಲ್ಲಿ ಸಹಜ ಆರ್ಗ್ಯಾನಿಕ್ಸ್ ಚಟುವಟಿಕೆಗಳನ್ನು ಶ್ಲಾಘಿಸಿದ್ದಾರೆ.

### ವೈವಿಧ್ಯ ಶ್ರೇಣಿಯ ಉತ್ಪನ್ನಗಳು...

ತಾಜಾ ಮತ್ತು ರುಚಿಕರ ಸಾವಯವ ಉತ್ಪನ್ನಗಳನ್ನು ಎಲ್ಲ ವರ್ಗದ ಜನರಿಗೆ ತಲುಪಿಸುವ ಮಹತ್ತರ ಉದ್ದೇಶದೊಂದಿಗೆ ಕಂಪನಿಯು ಕಾರ್ಯನಿರ್ವಹಿಸುತ್ತಿದೆ. ಅತ್ಯುತ್ತಮ ರುಚಿಯ ಕೆಂಪಕ್ಕಿ, ಕಪ್ಪಕ್ಕಿ, ರಾಜಮುಡಿ, ಪರಿಮಳದ ಅಕ್ಕಿ, ಔಷಧೀಯ ಅಕ್ಕಿ, ಡಯಾಬಿಟಿಕ್ ಅಕ್ಕಿ ಇತ್ಯಾದಿ ದೇಸಿ ಅಕ್ಕಿಗಳು, ರಾಗಿ, ನವಣೆ, ಸಾಮೆ, ಊದಲು, ಸಜ್ಜೆ, ಬರಗು, ಹಾರಕ, ಕೊರಲೆ, ಜೋಳ ಇತ್ಯಾದಿ ಸಿರಿಧಾನ್ಯಗಳು, ತೊಗರಿ, ಅಲಸಂದೆ, ಹೆಸರು, ಹುರುಳಿ, ಕಡಲೆ, ಉದ್ದು ಇತ್ಯಾದಿ ಕಾಳುಗಳು, ಶೇಂಗಾ, ಸಾಸಿವೆ, ಸೂರ್ಯಕಾಂತಿ, ಕುಸುಬೆ, ಎಳ್ಳು, ಹುಚ್ಚೆಳ್ಳು ಇತ್ಯಾದಿ ಅಡುಗೆ ಎಣ್ಣೆಗಳು, ಗೋಧಿ ಹಿಟ್ಟು, ಬಹುಕಾಳುಗಳ ಹಿಟ್ಟು, ರಾಗಿ ಹುರಿಟ್ಟು, ಮಿಲೆಟ್ ಮ್ಯಾಜಿಕ್ ಇತ್ಯಾದಿ ಮೌಲ್ಯವರ್ಧಿತ ಉತ್ಪನ್ನಗಳು, ಬೆಲ್ಲ, ಜೇನು, ಕಂದು ಸಕ್ಕರೆ, ದೇಸಿ ಹಸು ಮತ್ತು ಎಮ್ಮೆ ತುಪ್ಪ ಇತ್ಯಾದಿ ಮಸಾಲೆ ಪದಾರ್ಥಗಳು, ತಾಜಾ ಹಣ್ಣು, ಗೆಡ್ಡೆ, ಗೆಣಸು ಮತ್ತು ತರಕಾರಿಗಳನ್ನು ಪೂರೈಸುತ್ತಿರುವುದು ಕಂಪನಿಯ ವಿಶೇಷ.

### ಪ್ರಶಸ್ತಿ-ಪುರಸ್ಕಾರಗಳು...



2022 ಮತ್ತು 2025ನೇ ಸಾಲಿನ ಜೈವಿಕ್ ಇಂಡಿಯಾ ಅತ್ಯುತ್ತಮ ರೈತ ಉತ್ಪಾದಕ ಕಂಪನಿ ಪ್ರಶಸ್ತಿಯು ಸಹಜ ಆರ್ಗ್ಯಾನಿಕ್ಸ್ ಗೆ ದೊರೆತಿದೆ. ಅಲ್ಲದೆ ವಹಿವಾಟಿನಲ್ಲಿ ಅದ್ವಿತೀಯ ಸಾಧನೆಗಾಗಿ 2024ರಲ್ಲಿ . ಅಖಿಲ ಭಾರತ ವಾಣಿಜ್ಯಾಭಿವೃದ್ಧಿ ಸಂಸ್ಥೆಯ ಪ್ರಶಸ್ತಿ, 2017ರಲ್ಲಿ ಅಕಾಡೆಮಿ ಆಫ್ ಯೂನಿವರ್ಸಲ್ ಗ್ಲೋಬಲ್ ಪೀಸ್ ಜೀವಮಾನ ಸಾಧನೆ ಪುರಸ್ಕಾರ, ಸಾವಯವ ಕೃಷಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಟಿವಿ 9 ವಾಹಿನಿಯ ನವರತ್ನ ಪುರಸ್ಕಾರ ಹಾಗೂ ಇತರ ಅನೇಕ ಪ್ರಶಸ್ತಿಗಳಿಗೆ ಕಂಪನಿಯು ಭಾಜನವಾಗಿದೆ

**ದೇಶದ ವಿವಿಧ ಭಾಗಗಳಿಂದ ರೈತ ಉತ್ಪಾದಕ ಕಂಪನಿಗಳು ಕಲಿಕೆ ಮತ್ತು ಮಾರ್ಗದರ್ಶನಕ್ಕಾಗಿ ಕಂಪನಿಗೆ ಭೇಟಿ ಕೊಡುತ್ತಿವೆ.**



### ಭವಿಷ್ಯದ ಯೋಜನೆಗಳು...

ಮುಂದಿನ ದಿನಗಳಲ್ಲಿ 'ಸಹಜ ಆರ್ಗ್ಯಾನಿಕ್ಸ್' ಬ್ರ್ಯಾಂಡ್ ಅನ್ನು ದೇಶದ ಎಲ್ಲಾ ಭಾಗಗಳಿಗೆ ವಿಸ್ತರಿಸುವುದು, ತನ್ನ ಸಾವಯವ ಉತ್ಪನ್ನಗಳನ್ನು ಇತರ ದೇಶಗಳಿಗೆ ರಫ್ತು ಮಾಡುವುದು ಹಾಗೂ ಸಾವಯವ ಕೃಷಿಕರಿಗೆ ಅಗತ್ಯವಾಗಿ ಬೇಕಾದ ಬೀಜ, ಜೈವಿಕ ಗೊಬ್ಬರ ಇತ್ಯಾದಿ ಕೃಷಿ ಪರಿಕರಗಳ ಮಾರಾಟ ವ್ಯವಸ್ಥೆ ಕಲ್ಪಿಸುವುದು ಮುಂತಾದ ಹಲವು ಯೋಜನೆಗಳ ನೀಲಿನಕ್ಷೆಯನ್ನು ಕಂಪನಿಯು ಹಾಕಿಕೊಂಡಿದೆ. ನಿರ್ದೇಶಕ ಮಂಡಳಿಯ ಮಾರ್ಗದರ್ಶನ ಹಾಗೂ ವೃತ್ತಿಪರ ನೌಕರರ ಸಹಕಾರದಿಂದ ಇದನ್ನು ಸಾಧಿಸಬಹುದು ಎಂಬುದು ಕಂಪನಿಯ ನಿರೀಕ್ಷೆ.



# ಎಫ್. ಪಿ. ಒ ಗಳ ಯಶಸ್ವಿನ ಧ್ವನಿಗಳು



## ಸತತ ಪ್ರಯತ್ನಕ್ಕೆ ಫಲ ಕಟ್ಟಿಟ್ಟ ಬುತ್ತಿ ಎಂಬುದಕ್ಕೆ ಉದಾಹರಣೆಯಾದ ಹುನುಗುಂದ ಎಫ್. ಪಿ. ಓ



ಹುನಗುಂದ ತೋಟಗಾರಿಕಾ ರೈತ ಉತ್ಪಾದಕರ ಕಂಪನಿಯು ಸ್ಥಾಪನೆಯಾದ ನಂತರದಿಂದಲೇ ಕೃಷಿಕರ ಸಬಲೀಕರಣ ಹಾಗೂ ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸುವ ತನ್ನ ದೃಷ್ಟಿಕೋನದಲ್ಲಿ ಮಹತ್ವಪೂರ್ಣ ಪ್ರಗತಿಯನ್ನು ಸಾಧಿಸಿದೆ. ಈ ಸಾಧನೆಗಳು ರೈತರ ಜೀವನಮಟ್ಟವನ್ನು ಸುಧಾರಿಸುವಂತೆ ಹಾಗೂ ಕಂಪನಿಯ ಸುಸ್ಥಿರ ಅಭಿವೃದ್ಧಿಯ ದಿಸೆಯಲ್ಲಿ ಮುನ್ನಡೆಯುತಿದ್ದು, ಸುಸ್ಥಿರ ಕೃಷಿ ಪರಿಸರವನ್ನು ನಿರ್ಮಿಸಲು ತೊಡಗಿಕೊಂಡಿವೆ.



ಹುನಗುಂದ ಎಫ್. ಪಿ.ಓ ಕಾರ್ಯ ಚಟುವಟಿಕೆಗಳಲ್ಲಿ ಗುಣಮಟ್ಟದ ಕೃಷಿ ಪರಿಕರಗಳನ್ನು ಒದಗಿಸುವುದು, ತರಬೇತಿ ಮತ್ತು ತಾಂತ್ರಿಕ ಬೆಂಬಲ, ಮೌಲ್ಯವರ್ಧನೆ ಹಾಗೂ ಸಂಸ್ಕರಣೆಯ ಸೌಲಭ್ಯ, ಸಂಪರ್ಕ ವ್ಯವಸ್ಥೆಯ ಸುಧಾರಣೆ, ಮತ್ತು ಕೃಷಿಕರ ಲಾಭದಾಯಕತೆ ಹಾಗೂ ಸ್ವಾವಲಂಬತೆಯನ್ನು ಹೆಚ್ಚಿಸಲು ಸುಸ್ಥಿರ ಹಾಗೂ ಉತ್ತಮ ಕೃಷಿ ಪದ್ಧತಿಗಳ ಪ್ರಚಾರ ಸೇರಿದಂತೆ ಹಲವು ಉಪಯುಕ್ತ ಕಾರ್ಯಕ್ರಮಗಳನ್ನು ಮಾಡುತ್ತಿದೆ.

### ಕೃಷಿ ಯಂತ್ರಧಾರೆ ಕೇಂದ್ರಗಳು (CHC)

- ನವೀಕೃತ ಕೃಷಿ ಉಪಕರಣಗಳು ಮತ್ತು ಯಂತ್ರೋಪಕರಣಗಳ ಪರಿಚಯ ಮತ್ತು ಸೌಲಭ್ಯ.
- ಗೊಬ್ಬರ ಹಾಕುವುದು, ಬಿತ್ತನೆ, ಮತ್ತು ಕೊಯ್ಲು ಮಾಡುವಂತಹ ಸೇವೆಗಳನ್ನು ನೀಡುತ್ತವೆ.
- ದುಬಾರಿ ಯಂತ್ರೋಪಕರಣಗಳನ್ನು ಖರೀದಿಸಲು ಸಾಧ್ಯವಾಗದ ರೈತರಿಗೆ ಸಹಾಯ ಮಾಡುತ್ತದೆ.

### ಶೀತಗೃಹ (COLD STORAGE)

- ಹಣ್ಣುಗಳು, ತರಕಾರಿಗಳು ಹಾಲು ಉತ್ಪನ್ನಗಳು ಹಾಗು ಬೇಗ ಕೆಡುವ ಉತ್ಪನ್ನಗಳನ್ನು ಸಂರಕ್ಷಿಸುತ್ತದೆ.
- ಕೃಷಿ ಉತ್ಪನ್ನಗಳ ಶೇಖರಣಾ ಅವಧಿ ವಿಸ್ತರಿಸುತ್ತದೆ.
- ಕೊಯ್ಲು ನಂತರದ ನಷ್ಟವನ್ನು ಕಡಿಮೆ ಮಾಡುತ್ತದೆ ಮತ್ತು ಆಹಾರ ಭದ್ರತೆ ಹೆಚ್ಚಿಸುತ್ತದೆ.

### ಸಾಮಾನ್ಯ ಸೇವಾ ಕೇಂದ್ರಗಳು (CSC)

- ಆಧಾರ್ ನೋಂದಣಿ, ಡಿಜಿಟಲ್ ಪಾಠಶಾಲೆ, ಮತ್ತು ಇ-ಆಡಳಿತ ಮುಂತಾದ ಡಿಜಿಟಲ್ ಸೇವೆಗಳನ್ನು ಒದಗಿಸುತ್ತಿದೆ.
- ಸರ್ಕಾರದ ಸೇವೆಗಳನ್ನು ಗ್ರಾಮೀಣ ಪ್ರದೇಶಗಳಿಗೆ ಪೂರೈಸುತಿದೆ.
- ವಿವಿಧ ಸರ್ಕಾರ ಮತ್ತು ಖಾಸಗಿ ಸೇವೆಗಳನ್ನು ಒದಗಿಸಲು ಪ್ರವೇಶ ದ್ವಾರ ಚಟುವಟಿಕೆಗಳನ್ನು ಮಾಡುತ್ತಿದೆ.

### ಕೃಷಿ ಪರಿಕರಗಳ ಮಾರಾಟ

- ಬೀಜಗಳು,ರಸಗೊಬ್ಬರಗಳು, ಕೀಟನಾಶಕಗಳು ಮತ್ತು ಇತರೆ ಅಗತ್ಯ ಕೃಷಿ ಪರಿಕರಗಳನ್ನು ಪೂರೈಸಲಾಗುತ್ತದೆ.
- ಉತ್ಕೃಷ್ಟ ಮತ್ತು ಪ್ರಮಾಣಿತ ಉತ್ಪನ್ನಗಳ ಲಭ್ಯತೆಯನ್ನು ಖಚಿತಪಡಿಸಲಾಗುತ್ತದೆ.
- ಉತ್ತಮ ಬೆಳೆಯ ಉತ್ಪಾದನೆಗಾಗಿ ಪರಿಕರಗಳನ್ನು ಸರಿಯಾದ ಬಳಕೆಯ ಕುರಿತು ರೈತರಿಗೆ ಮಾರ್ಗದರ್ಶನ ನೀಡಲಾಗುತ್ತದೆ.

JanaTrupti™
*From the farms to families*

## ರೈತರ ಮತ್ತು ಜನಗಳ ತೃಪ್ತಿಯೇ ಜನ ತೃಪ್ತಿ ಬ್ರಾಂಡ್




ಜನತೃಪ್ತಿ ಹುನಗುಂದ ಎಫ್. ಪಿ.ಒ.ದ ರೈತ ಚಾಲಿತ ಬ್ರಾಂಡ್ ಆಗಿದ್ದು, ಉತ್ತಮ ಗುಣಮಟ್ಟದ, ರಾಸಾಯನಿಕ ಮುಕ್ತ ಆಹಾರ ಉತ್ಪನ್ನಗಳನ್ನು ಒದಗಿಸಲು ಬದ್ಧವಾಗಿದೆ. ಇದು ರೈತರನ್ನು ನೇರವಾಗಿ ಗ್ರಾಹಕರೊಂದಿಗೆ ಸಂಪರ್ಕಿಸಲು ಸಹಾಯ ಮಾಡುತ್ತದೆ ಹಾಗೂ ನ್ಯಾಯಯುತ ಬೆಲೆಗಳು ಮತ್ತು ತಾಜಾ ಉತ್ಪನ್ನಗಳನ್ನು ಖಚಿತಪಡಿಸುತ್ತದೆ. ಈ ಬ್ರಾಂಡ್ ಸುಸ್ಥಿರ ಕೃಷಿ, ಮೌಲ್ಯವರ್ಧನೆ ಮತ್ತು ಗ್ರಾಮೀಣ ಸಬಲೀಕರಣವನ್ನು ಉತ್ತೇಜಿಸುತ್ತದೆ. ಜನತೃಪ್ತಿ ಬೇಳೆ ಕಾಳುಗಳು, ಕಿರುಧಾನ್ಯಗಳು, ಮಸಾಲೆಗಳು ಮತ್ತು ಇತರ ಅಗತ್ಯ ಸರಕುಗಳನ್ನು ಒದಗಿಸುತ್ತದೆ. ಗುಣಮಟ್ಟ ಮತ್ತು ಸತ್ಯಾಸತ್ಯತೆಯ ಮೇಲೆ ಕೇಂದ್ರೀಕರಿಸಿ, ಇದು ರೈತರ ಆದಾಯವನ್ನು ಹೆಚ್ಚಿಸುವ ಆರೋಗ್ಯಕರ ಜೀವನಶೈಲಿಯನ್ನು ಬೆಂಬಲಿಸುತ್ತದೆ.

### ಫಾರ್ಮ್-ಟು-ಟೇಬಲ್ ತಾಜಾತನ

ಅತ್ಯುತ್ತಮ ಗುಣಮಟ್ಟದ, ನೈಸರ್ಗಿಕ ಮತ್ತು ತಾಜಾ ಸಾಮಗ್ರಿಗಳನ್ನು ಪೂರೈಸಲು ಅವುಗಳನ್ನು ನೇರವಾಗಿ ರೈತರ ಹೊಲಗಳಿಂದ ಪಡೆಯುತ್ತೇವೆ ಮತ್ತು ಪ್ರತಿಯೊಂದು ಉತ್ಪನ್ನವನ್ನು ಅತಿ ಉತ್ತಮ ಪೋಷಕಾಂಶಯುಕ್ತ ಗುಣಮಟ್ಟದಲ್ಲಿ ನಿಮಗೆ ತಲುಪಿಸುತ್ತೇವೆ.

### ನೀವು ನಂಬಬಹುದಾದ ಗುಣಮಟ್ಟ

ನಾವು ಕಟ್ಟುನಿಟ್ಟಾದ ಎಫ್. ಎಸ್. ಎಸ್. ಐ ಮಾರ್ಗಸೂಚಿಗಳು ಮತ್ತು ಗುಣಮಟ್ಟದ ತಪಾಸಣೆಗಳನ್ನು ಅನುಸರಿಸುತ್ತೇವೆ. ಆರೋಗ್ಯಕರ ಉತ್ಪನ್ನಗಳನ್ನು ಖಾತರಿಪಡಿಸುವುದು ನಮ್ಮ ಬದ್ಧತೆಯಾಗಿದೆ.

### ಸಂಪ್ರದಾಯ ಮತ್ತು ಪರಿಶುದ್ಧತೆ

ಹಳೆಯ ಕೃಷಿ ತಂತ್ರಗಳಲ್ಲಿ ಬೇರೂರಿರುವ ನಮ್ಮ ಉತ್ಪನ್ನಗಳ ಸತ್ಯಾಸತ್ಯತೆಯನ್ನು ಖಚಿತಪಡಿಸುತ್ತೇವೆ, ಪ್ರತಿ ಬಾರಿಯೂ ಸಂಪ್ರದಾಯದ ಶ್ರೀಮಂತಿಕೆಯನ್ನು ಅನುಭವಿಸು ಅವಕಾಶ .

### ಸುಸ್ಥಿರ ಅಭ್ಯಾಸಗಳು

ಪ್ರಕೃತಿಯನ್ನು ರಕ್ಷಿಸಲು ಮತ್ತು ಸಂಪನ್ಮೂಲಗಳನ್ನು ಸಂರಕ್ಷಿಸಲು ನಾವು ಪರಿಸರ ಸ್ನೇಹಿ ಕೃಷಿಗೆ ಆದ್ಯತೆ ನೀಡುತ್ತೇವೆ. ಒಟ್ಟಾಗಿ, ನಾವು ಆರೋಗ್ಯಕರ ಭವಿಷ್ಯಕ್ಕಾಗಿ ಸುಸ್ಥಿರತೆಯನ್ನು ಉತ್ತೇಜಿಸುತ್ತೇವೆ.

### ಶುದ್ಧ ಮತ್ತು ನೈಸರ್ಗಿಕ ಉತ್ಪನ್ನಗಳು

ಹಾನಿಕಾರಕ ರಾಸಾಯನಿಕಗಳಿಲ್ಲದೆ ಬೆಳೆದ ನಮ್ಮ ಉತ್ಪನ್ನಗಳು ಶುದ್ಧತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸುತ್ತವೆ. ನೈಸರ್ಗಿಕ, ಆರೋಗ್ಯಕರ ಮತ್ತು ಕೃತಕ ಸೇರ್ಪಡೆಗಳಿಂದ ಮುಕ್ತವಾದ ಆಹಾರವನ್ನು ಆನಂದಿಸಿ.

### ರೈತರ ಸಬಲೀಕರಣ

ರೈತರೊಂದಿಗೆ ನೇರವಾಗಿ ಕೆಲಸ ಮಾಡುವ ಮೂಲಕ, ನಾವು ನ್ಯಾಯಯುತ ಬೆಲೆಗಳನ್ನು ನೀಡಿ ಅವರ ಜೀವನೋಪಾಯವನ್ನು ಬೆಂಬಲಿಸುತ್ತೇವೆ. ನಮ್ಮನ್ನು ಆಯ್ಕೆ ಮಾಡುವುದು ಎಂದರೆ ಗ್ರಾಮೀಣ ಸಮುದಾಯಗಳನ್ನು ಬಲಪಡಿಸುವುದು ಎಂದೇ ಆಗಿದೆ.

# ಎಫ್. ಪಿ. ಒ ಗಳ ಯಶಸ್ವಿನ ಧ್ವನಿಗಳು



## ಕೋಟಿ ಕೋಟಿ ವಹಿವಾಟು ರೈತರಿಗೆ ಸೇವೆಗಳ ಜೊತೆ ಲಾಭಾಂಶದತ್ತ ಮಂಜುನಾಥ ಸ್ವಾಮಿ ರೈತ ಉತ್ಪಾದಕರ ಕಂಪನಿ



ಶ್ರೀ ಮಂಜುನಾಥ ಸ್ವಾಮಿ ರೈತ ಉತ್ಪಾದಕರ ಕಂಪನಿ ನಿಯಮಿತ ಚಿತ್ರದುರ್ಗ ತಾಲೂಕು ಚಿತ್ರದುರ್ಗ ಜಿಲ್ಲೆಯಲ್ಲಿ ಸ್ಥಾಪಿತವಾಗಿದ್ದು 1500 ಷೇರು ಸದಸ್ಯರನ್ನು ಒಳಗೊಂಡಿದೆ ಹಾಗೂ ರೂ.15 ಲಕ್ಷ ಷೇರು ಮೊತ್ತವನ್ನು ಸಂಗ್ರಹಿಸಿದ್ದು ಸರ್ಕಾರದಿಂದ ರೂ. 15 ಲಕ್ಷ ಇಕ್ವಿಟಿ ಅನುದಾನವನ್ನು ಪಡೆದಿರುತ್ತಾರೆ.

ಈ ಕಂಪನಿಯು ತುರುವನೂರು ಹೋಬಳಿ ವ್ಯಾಪ್ತಿಯಲ್ಲಿ ಬರುವ 35 ಹಳ್ಳಿಯ ಸುಮಾರು 12000 ರೈತರಿಗೆ ರಿಯಾಯಿತಿ ದರದಲ್ಲಿ ರಸಗೊಬ್ಬರ, ಕೀಟನಾಶಕ, ಬಿತ್ತನೆ ಬೀಜಗಳು ಟಾರ್ಪಲಿನ್, ಮತ್ತು ಕೃಷಿಯೇತರ ಉತ್ಪನ್ನಗಳನ್ನು ರೂ. 4 ಕೋಟಿ ವಹಿವಾಟು ಮಾಡಿರುತ್ತಾರೆ ಹಾಗೂ ಮಧ್ಯವರ್ತಿಗಳ ಹಾವಳಿ ತಪ್ಪಿಸಿ ಇಲ್ಲಿ



ಬೆಳೆಯುವ ಪ್ರಮುಖ ಬೆಳೆಗಳಾದ ಮೆಕ್ಕೆಜೋಳ, ತೊಗರಿ, ಸೂರ್ಯಕಾಂತಿ, ಮತ್ತು ಕಡಲೆ ಬೆಳೆಯುವ ಸುಮಾರು ಮೂರು ಸಾವಿರ ರೈತರಿಗೆ ನೇರ ಸ್ಥಳೀಯ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಿರುತ್ತಾರೆ. ಈ ಕಂಪನಿಯ ಉತ್ಪಾದನೆಯ ವ್ಯವಹಾರ ರೂ. 15 ಕೋಟಿ ಮತ್ತು ಕಂಪನಿಯ ಒಟ್ಟು ವಹಿವಾಟು ರೂ. 19 ಕೋಟಿ ಮಾಡಿರುತ್ತಾರೆ. ಜಲಾನಯನಾಭಿವೃದ್ಧಿ ಇಲಾಖೆ ಮತ್ತು ಕೃಷಿ ಇಲಾಖೆ ಚಿತ್ರದುರ್ಗ ರವರು ಈ ಕಂಪನಿಯ ರೈತರಿಗೆ ಕೃಷಿ ಯಂತ್ರಧಾರೆ ಕೇಂದ್ರವನ್ನು ನೆರವು ನೀಡಿರುತ್ತಾರೆ. ಈ ಕಂಪನಿಯು ಮೆಕ್ಕೆಜೋಳ, ಸೂರ್ಯಕಾಂತಿ, ತೊಗರಿ, ಬೀಜೋತ್ಪಾದನೆಯನ್ನು ಮಾಡಿ ರಾಷ್ಟ್ರೀಯ ಬೀಜ ನಿಗಮದೊಂದಿಗೆ ವ್ಯವಹಾರವನ್ನು ಮಾಡಿರುತ್ತಾರೆ ಹಾಗೂ ಈ ಕಂಪನಿಯಲ್ಲಿ ಸೂರ್ಯಕಾಂತಿ, ಕಡಲೆ ಮತ್ತು ತೊಗರಿ ಬೆಳೆಗಳಿಗೆ ಬೆಂಬಲ ಬೆಲೆ ಯೋಜನೆಯನ್ನು ನೀಡಿ ರೈತರಿಗೆ ಅನುಕೂಲ ಮಾಡಿರುತ್ತಾರೆ. ಈ ಕಂಪನಿಯು ಇಲ್ಲಿಯವರೆಗೂ 9 ಲಕ್ಷ ಆದಾಯವನ್ನು ಮಾಡಿರುತ್ತದೆ.ಕರ್ನಾಟಕ ರಾಜ್ಯ ರೈತ ಉತ್ಪಾದಕ ಸಂಸ್ಥೆ, ಬೆಂಗಳೂರು, ಶ್ರೀ ಮಂಜುನಾಥ ರೈತ ಉತ್ಪಾದಕ ಸಂಸ್ಥೆ ಉಪಾಧ್ಯಕ್ಷರಾದ ಕೆ.ಇ. ಪ್ರಸಾದಕರ್ ಅವರು ಈ ಸಂಸ್ಥೆಯ ಪ್ರತಿನಿಧಿಯಾಗಿ ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳ ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಶ್ರೀ ಮಂಜುನಾಥ ಸ್ವಾಮಿ ರೈತ ಉತ್ಪಾದಕ ಸಂಸ್ಥೆ ರೈತರ ಆದಾಯವನ್ನು ಹೆಚ್ಚಿಸುವುದರೊಂದಿಗೆ, ಖರ್ಚುಗಳನ್ನು ಕಡಿಮೆ ಮಾಡುವ ಮೂಲಕ ಉತ್ತಮ ಪ್ರಗತಿಯನ್ನು ಸಾಧಿಸುತ್ತಿದೆ.

## ರೈತರಿಗೆ ಅವಶ್ಯಕ ಸೇವೆಗಳನ್ನು ಒದಗಿಸುತ್ತಿರುವುದೇ ನಮ್ಮ ಬಲ: ಸರ್ವಜ್ಞೇಂದ್ರ FPO

ಸರ್ವಜ್ಞೇಂದ್ರ ರೈತ ಉತ್ಪಾದಕರ ಕಂಪನಿಯು ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನಲ್ಲಿ ಸ್ಥಾಪಿತವಾಗಿದ್ದು 875 ಷೇರು ಸದಸ್ಯರನ್ನು ಒಳಗೊಂಡಿದೆ ಹಾಗೂ ರೂ.15 ಲಕ್ಷ ಷೇರು ಮೊತ್ತವನ್ನು ಸಂಗ್ರಹಿಸಿದ್ದು ಸರ್ಕಾರದಿಂದ ರೂ. 15 ಲಕ್ಷ ಇಕ್ವಿಟಿ ಅನುದಾನವನ್ನು ಪಡೆದಿರುತ್ತಾರೆ. ಈ ಕಂಪನಿಯು ತನ್ನದೇ ಆದ ವಿಭಿನ್ನ ಶೈಲಿಯಲ್ಲಿ ಸುತ್ತಮುತ್ತಲಿನ ರೈತರಿಗೆ ಸೇವೆ ಸಲ್ಲಿಸುತ್ತಿದೆ. ಕಂಪನಿಯಿಂದ ದೊರೆಯವ ಸೌಲಭ್ಯಗಳು ಈ ಕೆಳಗಿನಂತಿದೆ:

ದೋಟಿ ಮುಖಾಂತರ ಔಷಧಿ ಸಿಂಪರಣೆ, ದೋಟಿ ಮುಖಾಂತರ ಅಡಿಕೆ ಕೊಯ್ಲು, ರೈತರ ಮನೆ ಬಾಗಿಲಿಗೆ ಹೋಲ್‌ಸೇಲ್ ದರದಲ್ಲಿ ಗೊಬ್ಬರ ಪೂರೈಕೆ, ಅಡಿಕೆ ಟೇಂಡರ್, “ಶಾಲ್ಮಲಾ” ಎಂಬ ತನ್ನದೇ ಆದ ಬ್ರಾಂಡ್ ನಲ್ಲಿ ಜೋನಿ ಬೆಲ್ಲ, ಅಪ್ಪೆಮಿಡಿ ಉಪ್ಪಿನಕಾಯಿ, ಕಾಳುಮೆಣಸು, ಸಾಂಬಾರು ಪದಾರ್ಥಗಳ ಮಾರಾಟ ಮಾಡಲಾಗುತ್ತಿದೆ, ರೈತರಿಗೆ ಅಡಿಕೆ ಸುಲಿಯುವ ಯಂತ್ರದ ಬಾಡಿಗೆ ಸೌಲಭ್ಯ. ಈ ಎಲ್ಲಾ ಸೇವೆಗಳನ್ನು ಕಂಪನಿಯು ಜನರಿಗೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಕಂಪನಿಯು ಅಡಿಕೆ ಟೆಂಡರ್ ಸದ್ಯ ಸುತ್ತಲಿನ ಕೆಲವು ಹಳ್ಳಿಗಳ ರೈತರಿಂದ ಖರೀದಿ ಮಾಡುತ್ತಿದ್ದು ಅದರ ವ್ಯಾಪ್ತಿಯನ್ನು ಹೆಚ್ಚಿಸುವ ಪ್ರಯತ್ನದಲ್ಲಿದೆ. ರೈತರ ಮನೆಗಳಿಗೆ ಕೆಲಸಗಾರರ ತಂಡ ರಚಿಸಿ ಕೆಲಸ ಮಾಡಿಸುವ ಯೋಜನೆಯನ್ನು ರೂಪಿಸಿಕೊಂಡಿದೆ.







## ಪಾರಂಪರಿಕ ಸಿರಿ ಧಾನ್ಯಗಳ ಸಂರಕ್ಷಣೆ ಮತ್ತು ಗ್ರಾಹಕರ ಆರೋಗ್ಯದ ಹೊಣೆ ಹೊತ್ತ ಕುಕನೂರು ಧರಣಿ ಸಿರಿಧಾನ್ಯ FPO

ಕುಕನೂರು ಧರಣಿ ಸಿರಿಧಾನ್ಯ ರೈತ ಉತ್ಪಾದಕ ಕಂಪನಿಯು ಕೊಪ್ಪಳ ಜಿಲ್ಲೆಯ ಕುಕನೂರು ತಾಲೂಕಿನಲ್ಲಿ ಸ್ಥಾಪಿತವಾಗಿದ್ದು 750 ಷೇರು ಸದಸ್ಯರನ್ನು ಒಳಗೊಂಡಿದೆ ಹಾಗೂ ರೂ.15 ಲಕ್ಷ ಷೇರು ಮೊತ್ತವನ್ನು ಸಂಗ್ರಹಿಸಿದ್ದು ಸರ್ಕಾರದಿಂದ ರೂ. 15 ಲಕ್ಷ ಇಕ್ವಿಟಿ ಅನುದಾನವನ್ನು ಪಡೆದಿರುತ್ತಾರೆ. ಈ ಸಂಸ್ಥೆ ರೈತರಿಗೆ ಉತ್ತಮ ಗುಣಮಟ್ಟದ ತಾಡಪತ್ರಿ, ಬ್ಯಾಟರಿ ಸ್ಪ್ರೇಯರ, ಗೊಬ್ಬರ, ಕೀಟನಾಶಕ ಹಾಗೂ ಸಿರಿಧಾನ್ಯ ಬೀಜಗಳನ್ನ ವಿತರಿಸಿ ರೈತರು ಬೆಳೆದ ಸಿರಿಧಾನ್ಯಗಳನ್ನು ಸಂಸ್ಕರಣೆ ಮಾಡಲು ಐಸಿಐಸಿಐ ಫೌಂಡೇಶನ್ ಸಹಕಾರದಿಂದ ತನ್ನದೇ ಆದ ಸಿರಿಧಾನ್ಯ ಸಂಸ್ಕರಣ ಘಟಕವನ್ನು ಸ್ಥಾಪಿಸಿ ರೈತರಿಗೆ ಸಹಾಯ ಮಾಡುತ್ತಿದೆ. ಜೊತೆಗೆ ಸಿರಿಧಾನ್ಯಗಳ ಮೌಲ್ಯವರ್ಧನೆ ಮಾಡಿ “ಕುಕನೂರ ಧರಣಿ” ಎಂಬ ಬ್ರ್ಯಾಂಡಿಂಗ್ ಮತ್ತು ಪ್ಯಾಕೇಜಿಂಗ್ ನೊಂದಿಗೆ ಹಲವು ಮೇಳಗಳಲ್ಲಿ ಭಾಗವಹಿಸಿ ವ್ಯವಹಾರ ಮಾಡುತ್ತಿದೆ. ಈ ಸಂಸ್ಥೆಯ ಒಟ್ಟು ವ್ಯವಹಾರ ವಹಿವಾಟು ರೂ. 70 ಲಕ್ಷ.







# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಚಟುವಟಿಕೆಗಳು






ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ (CoE-FPO), ಬೆಂಗಳೂರು, ಸಹ್ಯಾದ್ರಿ ಫಾರ್ಮರ್ಸ್ ಪ್ರೊಡ್ಯೂಸರ್ ಕಂಪನಿ ಲಿಮಿಟೆಡ್ (SFPCL) ಹಾಗೂ ಸಹ್ಯಾದ್ರಿ ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ (SRDF) ಇವುಗಳೊಂದಿಗೆ ಐತಿಹಾಸಿಕ ಒಪ್ಪಂದಪತ್ರಕ್ಕೆ (MoU) 2024ರ ಡಿಸೆಂಬರ್ 31ರಂದು ಸಹಿ ಹಾಕಿದೆ.






ಸರ್ಕಾರದ ಪ್ರತಿನಿಧಿ ತಂಡವು 2024ರ ಡಿಸೆಂಬರ್ 30ರಂದು ಸುಲಾ ವೈನ್ಯಾರ್ಡ್‌ಗಳಿಗೆ ಭೇಟಿ ನೀಡಿತು.






ಪ್ರೊಫೆಸರ್ ಜಯಶಂಕರ್ ತೆಲಂಗಾಣ ಕೃಷಿ ವಿಶ್ವವಿದ್ಯಾಲಯದ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ರೈತ ಉತ್ಪಾದಕರ ಸಂಸ್ಥೆಗಳ (FPOs) ಕುರಿತಾಗಿ ಪರಿಚಯಾತ್ಮಕ ಕಾರ್ಯಕ್ರಮವು 2025ರ ಜನವರಿ 4ರಂದು ಆಯೋಜಿಸಲಾಯಿತು.

# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ  ಚಟುವಟಿಕೆಗಳು




ಅಂತಾರಾಷ್ಟ್ರೀಯ ವ್ಯಾಪಾರ ಮೇಳ – ಆರ್ಗಾನಿಕ್ಸ್ & ಮಿಲ್ಲೆಟ್ಸ್ 2025ರಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ (CoE-FPO) 2025ರ ಜನವರಿ 23 ರಿಂದ 25 ರವರೆಗೆ ಭಾಗವಹಿಸಿತು.




FPO ಮೇಳ 2025 ಅನ್ನು 2025ರ ಫೆಬ್ರವರಿ 28 ರಿಂದ ಮಾರ್ಚ್ 2 ರವರೆಗೆ ಆಯೋಜಿಸಲಾಯಿತು.




ಪಾಲುದಾರರ ಸಂವಹನಕ್ಕಾಗಿ ಎಫ್‌ಪಿಒಗಳನ್ನು ಡಿಜಿಟಲೀಕರಣದ ಮೂಲಕ ಶಕ್ತೀಕರಿಸುವುದು" ಎಂಬ ವಿಷಯದ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು 2025ರ ಮಾರ್ಚ್ 6 ರಂದು ಆಯೋಜಿಸಲಾಯಿತು.

## ಸಾಮಾಜಿಕ ಮಾಧ್ಯಮಗಳಲ್ಲಿ
# ನಮ್ಮನ್ನು ಅನುಸರಿಸಿ

www.coefpo.org

COE FPO @coefpo

coefpo@gmail.com

COE FPO @coefpo

Centre of Excellence for Farmer Producer Organizations (CoE-FPO)

## ಸಂಪಾದಕೀಯ ಸಮೀತಿ


**ಪ್ರಕಾಶಕರು:**

**ಡಾ. ಸೀತಾರಾಮು ಜಿ. ಕೆ.**
**ನಿರ್ದೇಶಕರು**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ಮೊಬೈಲ್: 94820 47765

**ಸಂಪಾದಕರು:**

**ಡಾ. ಸದಾನಂದ ಜಿ. ಕೆ.**
**ಉಪ ನಿರ್ದೇಶಕರು**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ
ಮೊಬೈಲ್: 94811 81749

**ಸಹ ಸಂಪಾದಕರು:**

**ಡಾ. ಶಶಿಭೂಷಣ ಎ. ಘಟ್ನಟ್ಟಿ**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ವೈ.ಆರ್. ಜಯಣ್ಣ**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಪ್ರಸನ್ನ ಎಚ್. ಎಸ್.**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಮಧುಶ್ರೀ ಎ.**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ರಿತೇಶ್ ಜಿ. ಕೆ.**
ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ



## ಕೃತಜ್ಞತೆಗಳು

**ಭಾರತ ಸರ್ಕಾರದ ಹಾಗೂ ಕರ್ನಾಟಕ ಸರ್ಕಾರದ ಸಹಭಾಗಿತ್ವ ಇಲಾಖೆಗಳು ಮತ್ತು ಸಂಸ್ಥೆಗಳು**



## ವಿಳಾಸ:

**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ,**
**ತೋ. ವಿ. ವಿ. ಆವರಣ, ಜಿ. ಕೆ. ವಿ. ಕೆ. ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು- 560097**
**ದೂರವಾಣಿ: +91-80-29721577**
**ಮಿಂಚಂಚೆ: coefpo@gmail.com; ವೆಬ್ ಸೈಟ್: www.coefpo.org**